ಜನಶಕ್ತಿ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 46 ನವೆಂಬರ್ 21, 1982 ಬೆಲೆ 60 ಪೈಸೆ

ಕಾಂ|. ಗಂಗಾಧರ ನವೋಶಿ

ಕಾಂ| ಗಂಗಾಧರ ನವೋಶಿಯುವರು ಹಲವಾರು ತಿಂಗಳ ಅನಾರೋಗ್ಯದ ನಂತರ ತಾ|| 14-11-82 ರಂದು ಸಂಜೆ 4 ಗಂಟೆಗೆ ಸೋಲಾಪುರದ ಆಸ್ಪತ್ರೆಯುಲ್ಲಿ ಮೃತರಾದರು.

1947-48ರಲ್ಲಿ ಹೈದರಾಬಾದ್ ಜನತೆ ಕಮ್ಯೂನಿಸ್ಟ್ ಪಾರ್ಟಿ ಇತರ ಜನವಾದಿ ಜನರೊಂದಿಗೆ ಸಂಸ್ಥಾನದ ವಿಲೀನಕ್ಕೆ ಮತ್ತು ರಜಾಕಾರ ವಿರೋಧಿ ಚಳುವಳಿಯುಲ್ಲಿದ್ದಾಗಲೇ ಕಮ್ಯುನಿಸ್ಟ್ ಪಾರ್ಟಿ ಸೇರಿ 35 ವರ್ಷಗಳಿಂದಲೂ ಕಾರ್ಮಿಕರ, ರೈತರ, ವಿದ್ಯಾರ್ಥಿಗಳ ಮಧ್ಯೆ ಪಾರ್ಟಿ ಮುಖಂಡರಾಗಿ ಕೆಲಸ ಮಾಡಿದ್ದರು. ಗುಲ್ಬರ್ಗಾ-ಶಹಾಬಾದ್, ಹಟ್ಟಿಗಳಲ್ಲಿ ಕಾರ್ಮಿಕರ ಸಂಘಟನೆ-ಹೋರಾಟಗಳನ್ನು ಮಾಡಿದ್ದರು. ಪ್ರಾರಂಭದಲ್ಲಿ ಸಿ.ಪಿ.ಐ. ಅನಂತರ ಸಿ.ಪಿ.ಐ. (ಎಂ)ನ ರಾಜ್ಯ ಸಮಿತಿ ಸದಸ್ಯರಾಗಿಯೂ, ಮೊದಲು ಎ.ಐ.ಟಿ.ಯು.ಸಿ. ಅನಂತರ ಸಿ.ಐ.ಟಿ.ಯು. ಕಾರ್ಯಕಾರಿ

(8ನೇ ಪುಟ ನೋಡಿ)

ಕೇಂದ್ರ ಸರಕಾರದ ಜವಾಬ್ದಾರಿ

ಕೇಂದ್ರ ಸರಕಾರದ ಅಚಾತುರ್ಯದಿಂದಾಗಿ ಪಂಜಾಬ್– ಅಕಾಲಿದಳದ ಸಮಸ್ಯೆ ಗಂಭೀರವಾಗುತ್ತಿದ್ದು, ದೇಶದ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳಿಗೆ ಅಪಾರ ಚಿಂತೆಯನ್ನುಂಟುಮಾಡಿದೆ.

ಅಕಾಲಿದಳದ ಮುಖಂಡರು ಎಷ್ಟು ನಿರಾಕರಿಸಿದರೂ ಕೂಡ ಖಲಿಸ್ತಾನದ ಘೋಷಣೆ ಅಕಾಲಿಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿರುವುದು ಬಹಳ ಅಪಾಯಕಾರಿಯಾಗಿದೆ.

ಸಿಖ್‌ರಲ್ಲಿಯ ತೀವ್ರವಾದಿಗಳು ಖಲಿಸ್ತಾನ ಘೋಷಣೆಯನ್ನೆತ್ತಿದ್ದರು. ಇವರಿಗೆ ಅಮೇರಿಕದ ಸಾಮ್ರಾಜ್ಯಶಾಹಿಯ ಏಜಂಟರ ಬೆಂಬಲವಿದೆಯೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ನಮ್ಮ ದೇಶವನ್ನು ದುರ್ಬಲಗೊಳಿಸಿ, ಅದರ ಸ್ವಾತಂತ್ರ್ಯ ಮತ್ತು ರಕ್ಷಣೆಗೆ ಗಂಡಾಂತರವನ್ನುಂಟುಮಾಡುವ ದುರುದ್ದೇಶದಿಂದ ಛಿದ್ರಕಾರಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳನ್ನು ಪೋಷಿಸುತ್ತಿದ್ದಾರೆ ಸಾಮ್ರಾಜ್ಯಶಾಹಿ ಏಜಂಟರು. ಇಂಗ್ಲೆಂಡ್, ಅಮೇರಿಕ ಮತ್ತು ಕೆನಡಾ ಖಲಿಸ್ತಾನ ಪ್ರಚಾರಕರ ಮೂಲವಾಗಿದ್ದು, ನಮ್ಮ ದೇಶದೊಳಗೆ, ಸೀಖ್‌ರಲ್ಲಿಯ ತೀವ್ರವಾದಿಗಳ ಗುಂಪುಗಳಾದ ದಲ್‌ಖಾಲ್ಸ, ಬಿಂದ್ರನ್‌ವಾಲೆ ಮೊದಲಾದವರು ಈ ಪ್ರತ್ಯೇಕತಾವಾದಿ ಘೋಷಣೆಗಾಗಿ ದುಡಿಯುತ್ತಿದ್ದಾರೆ. ಹಾಗೂ ತೀವ್ರ ಪ್ರಚಾರ ಕೈಗೊಂಡಿದ್ದಾರೆ.

ಈ ತೀವ್ರವಾದಿಗಳ ಚಟುವಟಿಕೆಗಳ ಕುರಿತು ರಾಜ್ಯ ಮತ್ತು ಕೇಂದ್ರ ಸರಕಾರ ಅಧಿಕೃತ ಪ್ರಕಟಣೆ ನೀಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಎಷ್ಟು ಒತ್ತಾಯ ಮಾಡಿದರೂ ಕೂಡ ಅದನ್ನು ಮಾನ್ಯ ಮಾಡಲಿಲ್ಲ. ಎಲ್ಲ ವಿವರಣೆಗಳನ್ನು ಹೊಂದಿದ ಸರಕಾರದ ಪ್ರಕಟನೆ ಸಾರ್ವಜನಿಕರಲ್ಲಿ ಇಂಥ ಛಿದ್ರಕಾರಿ ಶಕ್ತಿಗಳನ್ನು ಬಯಲಿಗೆಳೆಯಲು ಸಹಾಯವಾಗುತ್ತಿತ್ತು. ಆದರೆ ಕಾಂಗ್ರೆಸ್ (ಐ) ಸರಕಾರ ತನ್ನ ನೀತಿ ಮತ್ತು ಕ್ರಮಗಳಿಂದ ಇಂಥ ಶಕ್ತಿಗಳಿಗೆ ಹೆಚ್ಚೆಚ್ಚು ಪ್ರೋತ್ಸಾಹ ನೀಡುವಂತಾಗಿದೆ.

ಇಂಥ ಗಂಡಾಂತರ ಪರಿಸ್ಥಿತಿಯಲ್ಲಿ ಕೂಡ ಅಕಾಲಿದಳದ ಮುಖಂಡರೊಡನೆ ಚರ್ಚಿಸಿದ್ದರೆ ಅವರ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತಿತ್ತು. ತತ್ವಶಃ ಅಕಾಲಿ ಮುಖಂಡರ ಧಾರ್ಮಿಕ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಅಡ್ಡಿ ಇಲ್ಲದಿರುವಾಗ ಇತರ ಬೇಡಿಕೆಗಳನ್ನು ಸೌಹಾರ್ದ ರೀತಿಯಲ್ಲಿ ಚರ್ಚಿಸುತ್ತೇವೆಂದು ಹೇಳುತ್ತಿದ್ದರೆ ಸಮಸ್ಯೆ ಪರಿಹಾರ ಕಂಡುಹಿಡಿಯಬಹುದಿತ್ತು. ಆದರೆ ಕೇಂದ್ರ ಸರಕಾರದ ಅಸಮರ್ಪಕ, ಮತ್ತು ಅನಿಶ್ಚಿತ ನಿಲುವೆ ತೀವ್ರವಾದಿ-ಛಿದ್ರಕಾರಿ ಶಕ್ತಿಗಳಿಗೆ ಹೆಚ್ಚು ಪ್ರೋತ್ಸಾಹ ನೀಡುವಂತಾಗಿದೆ.

ಚಂಡೀಗಡವನ್ನು 5 ವರ್ಷಗಳಲ್ಲಿ ಪಂಜಾಬಿಗೆ ಒಪ್ಪಿಸಲಾಗುವುದು, ಹೊಸ ರಾಜಧಾನಿ ಕಟ್ಟಲು ಹರಿಯಾಣಕ್ಕೆ ರೂ. ಹತ್ತು ಕೋಟಿ ಕೊಡಲಾಗುವುದೆಂದೂ 1970ರಲ್ಲೇ ಇಂದಿರಾ ಗಾಂಧಿ ನಿರ್ಣಯ ಹೇಳಿತ್ತು. ಹಾಗೆಯೇ ಫಜಿಲ್ಕ ಮತ್ತು ಅಬೋರನ್ನು ಹರಿಯಾಣಕ್ಕೆ ಕೊಡುವುದು, ನದಿ ನೀರಿನ ಸಮಸ್ಯೆಗೆ ಪರಿಹಾರ — ಇವುಗಳನ್ನು ಚರ್ಚೆ ಮೂಲಕ ಬಗೆಹರಿಸಲು ಸಾಧ್ಯ.

ದೇಶದ ರಕ್ಷಣೆಯ ದೃಷ್ಟಿಯಲ್ಲಿ ಪಂಜಾಬ್ ಅತಿ ಮಹತ್ವದ ಸ್ಥಾನದಲ್ಲಿದೆ ಸಾಮ್ರಾಜ್ಯಶಾಹಿಗಳೂ, ಪ್ರತ್ಯೇಕತಾವಾದಿಗಳೂ ಇಂಥೆಲ್ಲ ಗೊಂದಲವೆಬ್ಬಿಸುತ್ತಿದ್ದಾರೆ. ಅದ್ದರಿಂದ ಕೇಂದ್ರ ಸರಕಾರ ಪರಿಸ್ಥಿತಿಯನ್ನು ಚೆನ್ನಾಗಿ ಮನದಟ್ಟುಮಾಡಿಕೊಂಡು ಅಕಾಲಿ ಸಮಸ್ಯೆಯನ್ನು ಸೌಹಾರ್ದ ರೀತಿಯಲ್ಲಿ ಬಗೆಹರಿಸುವುದು ಅತ್ಯಗತ್ಯ.

ಸಾಮ್ರಾಜ್ಯಶಾಹಿಗಳ ಒಳಸಂಚಿನ ವಿರುದ್ಧ, ಕೇಂದ್ರ ಸರಕಾರದ ನೀತಿಯ ವಿರುದ್ಧ ಹೋರಾಡಬೇಕೆಂದು ದೇಶದ ಜನತೆಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಕರೆ ಕೊಡುತ್ತದೆ. ದೇಶದ ಸಮಗ್ರತೆಯ ದೃಷ್ಟಿಯಿಂದ ತೀವ್ರವಾದಿ ಅಕಾಲಿಗಳ ವಿರುದ್ಧ ಹೋರಾಡಬೇಕೆಂದೂ ಸಿ.ಪಿ.ಐ. (ಎಂ) ಸೀಖರಿಗೆ ಕರೆ ಕೊಡುತ್ತದೆ. ಹಾಗೆಯೇ ಪಂಜಾಬ್ ಮತ್ತು ದಿಲ್ಲಿ ಪ್ರದೇಶಗಳಲ್ಲಿ ಅಕಾಲಿಗಳಿಂದುಂಟಾಗುವ ಗೊಂದಲಕ್ಕೆಲ್ಲ ಇಂದಿರಾ ಸರಕಾರವೇ ಸಂಪೂರ್ಣ ಜವಾಬ್ದಾರಿಯಾಗಿದೆ.

ಯಶಸ್ವಿ-ಐತಿಹಾಸಿಕ ಹಾಗೂ ಮಹತ್ವಪೂರ್ಣ

೨೪ನೆಯ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನ

ಅಖಿಲ ಭಾರತ ಕಿಸಾನ ಸಭಾದ 24ನೆಯ ಸಮ್ಮೇಳನವು ಪ. ಬಂಗಾಲದ ಮಿಡ್ನಾಪುರದಲ್ಲಿ ನವ್ಹೆಂಬರ್ 8 ರಿಂದ 11ರ ವರೆಗೆ ನಡೆಯಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹಿಂದೆಂದೂ ಕಂಡರಿಯದಷ್ಟು ದೊಡ್ಡ-ವಿಶಾಲ-ತೀವ್ರ ಪ್ರಮಾಣದ ಐಕ್ಯ ರೈತ ಹೋರಾಟವು ಸಿಡಿದೆದ್ದು ಬೆಳೆದು ಬಲಿಷ್ಟಗೊಳ್ಳುತ್ತಿರುವ ಈ ಕಾಲಘಟ್ಟದ ಹಿನ್ನೆಲೆಯಲ್ಲಿ ಜರುಗಿದ ಅತೀ ಮಹತ್ವಪೂರ್ಣ ಸಮ್ಮೇಳನ ಇದಾಗಿದೆ.

ಇತ್ತೀಚಿನ ಬೆಳವಣಿಗೆಗೆ ಮೂರೂವರೆ ವರ್ಷಗಳ ಹಿಂದೆ ಜರುಗಿದ್ದ ವಾರಣಾಸಿಯ 23ನೆಯ ಅಧಿವೇಶನವು ದಿಕ್ಸೂಚಿಯನ್ನು ನೀಡಿ ಚಿರಸ್ಮರಣೀಯವಾಗಿದೆ. ವಿಶಾಲ, ಹಿಂದುಳಿದ ಭಾರತದಲ್ಲಿ ಕಿಸಾನ್ ಚಳವಳಿ ಕಟ್ಟಿ ಬೆಳೆಸಲು ಅವಶ್ಯವಿರುವ ಸೂಕ್ತ ನಿಲುವನ್ನು ನೀಡಿ, ವಿಶೇಷವಾಗಿ ಕಿಸಾನ್ ಸಭಾ ಚಳವಳಿ ಮತ್ತು ಸಂಘಟನೆಗೂ ಹಾಗೂ ಸಾಮಾನ್ಯವಾಗಿ ಇಡೀ ದೇಶದ ರೈತಾಪಿ ಚಳವಳಿ ಹೋರಾಟಕ್ಕೂ ನಿರ್ಣಾಯಕ ನಿರ್ಧಿಷ್ಟ ನಿಲುವನ್ನು ನೀಡಿರುವ ಐತಿಹಾಸಿಕ ಮೈಲುಗಲ್ಲಾಗಿದೆ.

ವಾರಣಾಸಿ ಮುಂದುವರೆದು, ಬೆಳೆದು ಈಗ ಮಿಡ್ನಾಪುರದಲ್ಲಿ ಬಲಿತು ಬಲಿಷ್ಟಗೊಂಡಿದೆ ಪ. ಬಂಗಾಲದ ಎಡರಂಗ ಸರಕಾರವು ರೈತ–ಕೃಷಿ ಕೂಲಿಕಾರರ ಪರ ಅದೆಷ್ಟೋ ಪ್ರಗತಿಪರ, ಸೂಕ್ತ ತುರ್ತು ಕ್ರಮ, ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅನೇಕ ಕುತಂತ್ರ ಮಾಡಿಯೂ ಕೇಂದ್ರದ ಇಂದಿರಾ ಸರಕಾರಕ್ಕೆ ಉರುಳಿಸಲ ಸಾಧ್ಯವಾಗಿ, ಒಂದು ಅವಧಿ ಮುಗಿದು ಇನ್ನೊಂದು ಚುನಾವಣೆ ನಡೆದು ರೈತ, ಕೃಷಿ ಕೂಲಿಗಾರರ ಅಪಾರ ಪ್ರೀತಿ, ವಿಶ್ವಾಸಗಳಿಸಿ ಜಯಭೇರಿ ಹೊಡೆದು ಮತ್ತೆ ಅಧಿಕಾರಕ್ಕೆ ಬಂದಿದೆ. ಸಾಮೂಹಿಕ ಸಂಘಟನೆಯ ಸಹಾಯ, ಸಹಕಾರಗಳನ್ನು ಮೈಗೂಡಿಸಿಕೊಂಡು ಕಾಂಗ್ರೆಸ್ಸಿಗೆ ಬದಲಿ ನೀತಿಗಳನ್ನು ಇದ್ದ ಅಧಿಕಾರ ವ್ಯಾಪ್ತಿಯಲ್ಲೇ ರೂಪಿಸಿಕೊಂಡು, ಕಾರ್ಯಗತಮಾಡಿ ದೇಶದ ಎಡ-ಪ್ರಜಾಪ್ರಭುತ್ವ ಹೋರಾಟಕ್ಕೆ ಸ್ಪಷ್ಟ ಅರ್ಥ ನೀಡಿರುವ ರಾಜ್ಯದಲ್ಲಿ 24ನೇಯ ಅಧಿವೇಶನ ನಡೆದುದು ವಿಶೇಷವಾಗಿತ್ತು.

ಸಮ್ಮೇಳನದ ಪ್ರಾರಂಭದಲ್ಲಿ 8-11-82ರ ಸಂಜೆ 4 ಘಂಟೆಗೆ ಕಿಸಾನ್ ಸಭಾದ ಧ್ವಜಾರೋಹಣವು ಕಾಂ| ಹರಿಕಿಷನ್ ಸಿಂಗ್ ಸುರ್ಜೀತರಿಂದ ನೆರವೇರಿತು. "ಕೆಂಬಾವುಟಕ್ಕೆ ವಂದಿಸುವೆವು," "ಕೆಂಬಾವುಟ ಹಿಡಿದು ಮುನ್ನಡೆಯುವೆವು"— ಘೋಷಣೆಗಳು ಎಲ್ಲರ ಮನಮಿಡಿಯುವಂತಾಗಿತ್ತು. ಹೋರಾಟಗಳಲ್ಲಿ ಬಲಿದಾನಗೈದವರಿಗೆ ಗೌರವ ಸೂಚಕ ಪುಷ್ಪಾಂಜಲಿಗಳನ್ನು ಕಾಂ| ಇ.ಎಂ.ಎಸ್. ನಂಬೂದ್ರಿಪಾಡ್, ಜ್ಯೋತಿಬಸು, ಬಸವಪುನ್ನಯ್ಯ, ಸುರ್ಜಿತ್, ಗೋದಾವರಿ ಪರುಳೇಕರ್, ಬಿನಾಯ್ ಕೃಷ್ಣ ಚೌದರಿ ಮತ್ತು ಕಾಂ|ಚಾತುನ್ನಿ ಮಾಸ್ಟರ್ ಅವರುಗಳು ಅರ್ಪಿಸುತ್ತಿರುವಾಗ, "ನಾವು ಎಂಥ ತ್ಯಾಗ, ಬಲಿದಾನಕ್ಕೂ ಸಿದ್ಧ" ಎಂದು ಸ್ಪಂಧಿಸುವಂತಾಗಿತ್ತು.

ಪ್ರತಿನಿಧಿ ಸಭೆ 5-30ಕ್ಕೆ ಪ್ರಾರಂಭವಾಯಿತು. ಕಿಸಾನ ಸಭಾ ನಿಲುವನ್ನು ಜಾರಿಗೊಳಿಸುವ ವಿರೋಚಿತ ಹೋರಾಟಗಳಲ್ಲಿ ಬಲಿದಾನ ಗೈದ ವೀರ ಹುತಾತ್ಮರಿಗೆ ಗೌರವ ಸೂಚಿಸಲು ಎರಡು ನಿಮಿಷ ಮೌನವನ್ನಾಚರಿಸಲಾಯಿತು. ಕಾಂ|| ಎ. ಬಾಲಸುಬ್ರಮಣ್ಯಂ, ಜೈಪಾಲ್ ಸಿಂಗ್, ಸುಹರಿದ್ ಮಲ್ಲಿಕ್ ಚೌದರಿ, ರಮಾನಂದ ಸಿಂಗ್, ಹರದಿತ್ ಸಿಂಗ್ ಬುಟ್ಟೈಲ್, ಫೌಜಾಸಿಂಗ್ ಬುಳ್ಳಾರ್, ಎ. ವಿ. ಕುಂಞಂಬು, ಸತ್ಯನಾರಾಯಣ ಸಿಂಗ್, ಚೌಧರಿ ಘಾಸೀರಾಮ್, ಜ್ಯೋತಿರ್ಮಯಿ ಬಸು, ದಿನೇಶ್ ಭಟ್ಟಾಚಾರ್ಯ ಮತ್ತು ಕಾಂ| ಮುಕುಂದ್ ಮಂಡಲ್— ಈ ಎಲ್ಲಾ ನಾಯಕರುಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಇತ್ತೀಚಿಗೆ ನಿಧನರಾದ ಶ್ರೀ ಶೇಖ್ ಅಬ್ದುಲ್ಲಾ ಅವರಿಗೂ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾಂ|| ಬಿನಾಯ್‌ಕೃಷ್ಣ ಚೌಧರಿ ರವರು ಅಧ್ಯಕ್ಷ ಭಾಷಣಮಾಡುತ್ತ, "ಈ

(8ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ :

ಧೋತಿವಾಲೆ, ಲುಂಗಿವಾಲೆ ನಹಿ ರಹನಾ ಚಾಹಿಯೆ

ಎನ್ಕೆ–

"ಧೋತಿ ವಾಲೆ, ಲುಂಗಿವಾಲೆ ನಹಿ ರಹನಾ ಚಾಹಿಯೇ" (ಧೋತಿಯವರು, ಲುಂಗಿಯವರು ನಮ್ಮಲ್ಲಿರಬಾರದು) ಎಂದು ದಾರು ಕುಡಿದು ಕೊಂಕಣಿ ಭಾಷೆಯಲ್ಲಿ ನಮ್ಮನ್ನೆಲ್ಲ ಬೈದರು, ಹೊಡೆದರು, ಹೆಂಗಸರು – ಮಕ್ಕಳ ಮೇಲೆ ಅತ್ಯಾಚಾರ ಮಾಡಿದರು. ನಮ್ಮನ್ನೆಲ್ಲ ಗೋವೆ ಬಿಡುವಂತೆ ಹೊಡೆದಟ್ಟಿಸಿದರು ಎಂದು ಹೇಳಿದವ ನಿಂಗಪ್ಪ ಯಾಾವಳಗಿ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ಯಾಳಗಿ ಹಳ್ಳಿಯವ. "ನಾಲ್ಕೈದು ಜನ ಬಂದು ನಾನು ಕೆಲಸಕ್ಕೆ ಉಪಯೋಗಿಸುತ್ತಿದ್ದ ಸನಿಕೆ-ಗುದ್ದಲಿಯಿಂದಲೇ ನನಗೆ ಹೊಡೆದರು. ನಾನು ಪೋಲೀಸರಿಗೆ ತಕರಾರು ಮಾಡಿದ್ದೇನೆ."ಆತ ಬೆನ್ನಿಗೆ–ಕೈಗೆ ಪೆಟ್ಟು ಬಿದ್ದಿರುವುದರಿಂದ ಕೈಗೆ ಬ್ಯಾಂಡೇಜ್ ಕಟ್ಟಿಕೊಂಡೇ ಬಂದಿದ್ದ. ನಿಂಗಪ್ಪ ಮತ್ತು ತಿಪ್ಪಣ್ಣ ವಾಸ್ಕೋದಲ್ಲಿ, ಹನಮಂತ ದಾಬೋಲಿಯಲ್ಲಿ ಕೆಲಸ ಮಾಡುವವರು. ದಾಬೋಲಿಯಲ್ಲಿ 180 ಗುಡಿಸಲುಗಳನ್ನು ಸುಡಲಾಯಿತು, ಮಾಗೂರ ಕ್ಯಾಂಪಿನಲ್ಲಿ ಕನ್ನಡ ಶಾಲೆಯನ್ನು ಕೆಡವಲಾಯಿತೆಂದು ಸಿಂದಗಿ ತಾಲ್ಲೂಕಿನ ಯಂಕಚಿ ಗ್ರಾಮದವನಾದ ಹಣಮಂತ ಹೇಳಿದ.

ಹಲವಾರು ವರ್ಷಗಳಿಂದ ಗೋವೆಯಲ್ಲಿ ದುಡಿಯುತ್ತಿದ್ದ ನೂರಾರು ಜನ ತಮ್ಮ ಹೆಂಡರು ಮಕ್ಕಳೊಂದಿಗೆ ಕಂಗಾಲಾಗಿ ಓಡಿಬರುತ್ತಿದ್ದಾರೆ. ಬಿಜಾಪುರದಲ್ಲಿ ಅವರನ್ನು ಸಂದರ್ಶಿಸಿದಾಗ ಸಿಗುವ ಹಲವಾರು ವಿವರಣೆಗಳು —ನಮ್ಮ ದೇಶ ಎತ್ತ ಸಾಗುತ್ತಿದೆ ? ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಇಂದಿರಾ ಸರಕಾರ ಇಂಥ ಛಿದ್ರಕಾರಿ ಶಕ್ತಿಗಳನ್ನೆದುರಿಸಲು ಅಸಮರ್ಥವಾಗಿದೆಯೇ ? ಹಾಗಾದರೇನು ಮಾಡಬೇಕು ಎಂಬ ಸಮಸ್ಯೆಗಳತ್ತ ಗಮನ ಸೆಳೆಯುತ್ತದೆ. ಈಶಾನ್ಯ ದಿಕ್ಕಿನಲ್ಲಿ 3 ವರ್ಷಗಳಿಂದಲೂ ನಡೆಯುತ್ತಿರುವ ಅಸ್ಸಾಂ ಚಳುವಳಿ, ಪಂಜಾಬಿನಲ್ಲಿ ಖಲಿಸ್ತಾನ್, ಮಹಾರಾಷ್ಟ್ರದಲ್ಲಿ ಶಿವಸೇನೆ, ಕರ್ನಾಟಕದಲ್ಲಿ ಕನ್ನಡ ಚಳುವಳಿ, ಈಗ ಗೋವೆಯಲ್ಲಿ ಹೊರಗಿನವರಿಗೆ ಸ್ಥಾನವಿಲ್ಲೆಂಬ ಚಳುವಳಿ–ಹೀಗೆ ದೇಶಾದ್ಯಂತ ಛಿದ್ರಕಾರಿ ಶಕ್ತಿಗಳ ಚಲ್ಲಾಟ ತೀವ್ರಸ್ವರೂಪ ತಾಳುತ್ತಿದೆ. ಅಮೇರಿಕದ ಸಾಮ್ರಾಜ್ಯಶಾಹಿಯ ಕೈವಾಡದ ಜೊತೆಯಲ್ಲಿ ಆಳುವ ಕಾಂಗ್ರೆಸ್, ಸಂಕುಚಿತ ಮನೋಭಾವದ ರಾಷ್ಟ್ರೀಯವಾದಿಗಳು, ಜಾತೀಯವಾದಿಗಳು ಮತ್ತು ಪ್ರತಿಗಾಮಿಗಳು ಇಂಥ ಛಿದ್ರಕಾರಿ ಚಳುವಳಿಗೆ ಪ್ರೋತ್ಸಾಹಕೊಡುತ್ತಿವೆ. ಅಮೇರಿಕದ ಸಾಮ್ರಾಜ್ಯವಾದ ಮತ್ತು ಇಂದಿರಾ ಕಾಂಗ್ರೆಸ್ ವಿರುದ್ಧ ದೇಶಾದ್ಯಂತ ಬೆಳೆಯುತ್ತಿರುವ ವಿರೋಧ,ವಿರೋಧಪಕ್ಷಗಳ ಅದರಲ್ಲೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯನ್ನೊಳಗೊಂಡ ಎಡಪಕ್ಷಗಳ ಪ್ರಭಾವದಲ್ಲಿ ಹೆಚ್ಚಳ ಕಾಂಗ್ರೆಗೆ ಪರ್ಯಾಯವಾಗಿ ಎಡ ಮತ್ತು ಪ್ರಜಾಪ್ರಭುತ್ವರಂಗಕ್ಕೆ ಸಿಗುತ್ತಿರುವ ಸ್ವಾಗತಗಳನ್ನು ಕಂಡ ಪ್ರತಿಗಾಮಿಗಳೂ, ಜಾತೀಯವಾದಿಗಳೂ ಭಾರತೀಯರು ಭಾರತ ದೇಶದ ಯಾವ ರಾಜ್ಯದಲ್ಲೂ ನೆಲೆಸುವ ಹಕ್ಕನ್ನು ಪಡೆದಿದ್ದಾರೆಂಬುದನ್ನು ಬಿಟ್ಟುಕೊಟ್ಟು, ಪರ ರಾಜ್ಯದವರು ತಮ್ಮಲ್ಲಿ ನೆಲೆಸಬಾರದೆಂಬ ರಾಷ್ಟ್ರ ವಿರೋಧ ಧೋರಣೆಯನ್ನನುಸರಿಸುತ್ತಿದ್ದಾರೆ. ಅಸ್ಸಾಂ, ಗೋವಗಳಲ್ಲಿ ನಡೆಯುತ್ತಿರುವ ಚಳುವಳಿಯನ್ನೂ, ಮತ್ತೊಂದು ಪ್ರಾಂತದ ಜನರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳನ್ನೂ ತೀವ್ರವಾಗಿ ಖಂಡಿಸಲೇಬೇಕು. ಗೋವೆಯಲ್ಲಿ ನಡೆಯುತ್ತಿರುವ ಅತ್ಯಾಚಾರವನ್ನು ಕೂಡಲೇ ತಡೆಗಟ್ಟುವಂತೆ ಕೇಂದ್ರ ಸರಕಾರ ಯೋಗ್ಯ ಕ್ರಮಕೈಗೊಳ್ಳಬೇಕೆಂದು ಸಂಘಟಿತ ಒತ್ತಾಯ ತರುವುದು ಅತ್ಯಗತ್ಯ.

ರಾಜೀವ ಗಾಂಧಿ ಹೋದರು —ಜನ ಬಂದರು

ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕ–ಆಂಧ್ರ ರಾಜ್ಯಗಳ ಆಗು ಹೋಗುಗಳ ಕುರಿತು ಚಿಂತಿಸ ಹತ್ತಿದೆ. ಕರ್ನಾಟಕದಲ್ಲಿ ಎಲ್ಲ ವಿರೋಧಿ ಪಕ್ಷಗಳು ಕಾಂಗ್ರೆಯನ್ನು ಒಟ್ಟಾಗಿ ಎದುರಿಸಬೇಕೆಂದು ನಿರ್ಧರಿಸಿರುವುದು, ಸಿನೆಮಾನಟ ರಾಜಕುಮಾರ್ ವಿರೋಧ ಪಕ್ಷಗಳ ಪರವಾಗಿ ಪ್ರಚಾರ ಮಾಡಬಹುದೆಂಬ ಭೀತಿ, ಗುಂಡೂರಾಯರು ಎಷ್ಟು ಹೆಮ್ಮೆಯ ಮಾತುಗಳನ್ನಾಡಿದರೂ, ಕಾಂಗ್ರೆಸ್ ಮುಖಂಡರ ಎದೆ "ಡವಡವ" ಅನ್ನಿಸಹತ್ತಿದೆಂಬುದಕ್ಕೆ ಇತ್ತೀಚಿನ ಘಟನೆಗಳೇ ಸಾಕ್ಷಿ. ಆಂಧ್ರಕ್ಕೆ ಇಂದಿರಾ ಗಾಂಧಿ ಸ್ವತಃ ಭೇಟಿಕೊಟ್ಟದ್ದಾರೆ. ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ ಮಂತ್ರಿಗಳ ಸಾಮೂಹಿಕ ಮೆರವಣಿಗೆ ನಡೆದಿದೆ. ಅದು ಸಾಲದೆ ರೈತ-ಕೃಷಿ ಕಾರ್ಮಿಕರ ಸಮ್ಮೇಳನಗಳ ಹೆಸರಲ್ಲಿ ರಾಜೀವ ಗಾಂಧಿಯ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗಿದೆ. ವರ್ತಮಾನ ಪತ್ರಿಕೆಗಳಲ್ಲಿ ಲಕ್ಷಾವಧಿ ರೂಪಾಯಿ ಖರ್ಚಿನಿಂದ ಪ್ರಚಾರ ನಡೆದರೂ ಕೂಡ ರಾಜೀವ ಗಾಂಧಿಯವರ ಕಾರ್ಯಕ್ರಮಕ್ಕೆ ಜನರನ್ನು ತರಿಸುವಲ್ಲಿ ಕಾಂಗ್ರೆಸ್ ಮುಖಂಡರು ಸೋತಿದ್ದಾರೆ. ಟ್ರಕ್-ಟ್ರಾಕ್ಟರ್ ತುಂಬಿಕೊಂಡು ಹಳ್ಳಿ ಜನರನ್ನು ತರಿಸುವ ಯೋಜನೆ ವಿಫಲವಾಯಿತು. ರೈತ-ಕಾರ್ಮಿಕರ ಸಮ್ಮೇಳನದ ಹೆಸರನ್ನೂ ಉಚ್ಚರಿಸದೆ ಭಾಷಣಗಳಾದವು. ನಗರದ ಕೆಲವೇ ಜನ ಭಾಷಣ ಕೇಳಿದರು. ಬಿಜಾಪುರದಲ್ಲಿ ರಾಜೀವ ಗಾಂಧಿಯ ಹೆಲಿಕಾಪ್ಟರ್ ಮೇಲೆ ಹಾರಿದಂತೆಯೇ ಕೆಲವು ಹಳ್ಳಿಜನರ ತುಂಬಿದ ಹಾಗೆಯೇ ಹಲವಾರು ಖಾಲಿ ಟ್ರಕ್ಕುಗಳು ಬಂದವು. ಕೃಷಿ ಕಾರ್ಮಿಕರ – ರೈತರ ಸಮಸ್ಯೆಗಳನ್ನಾಗಲೀ, ಬರಗಾಲ ಪರಿಹಾರದ ಕುರಿತಾಗಲೀ ರಾಜೀವ ಗಾಂಧಿ ಚಕಾರ ಶಬ್ದ ಎತ್ತಲಿಲ್ಲ. ಪ್ರತ್ಯೇಕತಾವಾದ ದೇಶದ ಐಕ್ಯತೆಗೆ ಗಂಡಾಂತರ. ಅದರಿಂದ ದೇಶದ ಅಭಿವೃದ್ಧಿಗೆ ಅಡೆತಡೆ ಉಂಟಾಗುತ್ತದೆಂದು ಹೇಳಿದರು. ಅವರು ಭಾಷಣ ಮಾಡುತ್ತಿದ್ದಂತೆಯೇ ಬಿಜಾಪುರ ಜಿಲ್ಲೆಯ ನೂರಾರು ಜನ ತಮ್ಮ ಹೆಂಡರು ಮಕ್ಕಳ ಜೊತೆಯಲ್ಲಿ ನೆರೆರಾಜ್ಯ ಗೋವಾದಲ್ಲಿ ಗುಂಡಾಜನರಿಂದ ಹೊಡೆಸಿಕೊಂಡು, ಗುಡಿಸಲುಗಳನ್ನು ಸುಡಿಸಿಕೊಂಡು ಭಯಭೀತರಾಗಿ ಓಡಿಬರುತ್ತಿರುವ ದೃಶ್ಯ ಕರುಣಾಜನಕವಾಗಿತ್ತು. ಪರಪ್ರಾಂತದವರು ಗೋವೆಯಲ್ಲಿರಬಾರದೆಂಬ ಚಳುವಳಿಗೆ ದಕ್ಷಿಣ ಭಾರತದ ದುಡಿಯುವ ಜನ ತುತ್ತಾಗಿರುವುದನ್ನು ರಾಜೀವ ಗಾಂಧಿ ತಮ್ಮ ಭಾಷಣದಲ್ಲಿ ನೆನಸಲಿಲ್ಲ. ಖಂಡಿಸಲಿಲ್ಲ. ಇಂಥ ಛಿದ್ರಕಾರಿ ಶಕ್ತಿಗಳನ್ನೆದುರಿಸಲು ಏನು ಕ್ರಮ ತೆಗೆದುಕೊಂಡಿದ್ದೇವೆಂಬುದನ್ನು ಹೇಳಲಿಲ್ಲ. ತನ್ನ ತಾಯಿ ಇಂದಿರಾ ಗಾಂಧಿಯ ಆಡಳಿತೆಯಲ್ಲಿ ಅಸ್ಸಾಂ, ಖಲಿಸ್ತಾನ ಚಳುವಳಿಗಳು ನಿರ್ಭಯದಿಂದ ಮುಂದುವರಿದಿರುವಾಗ ಅದನ್ನು ತಡೆಗಟ್ಟುವ ಶಕ್ತಿ ಕೇಂದ್ರ ಸರ್ಕಾರಕ್ಕಿಲ್ಲದಿರುವಾಗ, ಗೋವೆಯಲ್ಲಿ ನಡೆಯುತ್ತಿರುವ ಹತ್ಯಾಕಾಂಡದ ಕುರಿತು ನಾಲಿಗೆ ಎತ್ತುವ ಧೈರ್ಯ ರಾಜೀವ ಗಾಂಧಿಗೆ ಬರಲು ಸಾಧ್ಯವೇ ?

ಜನತೆ ತಮ್ಮ ಸಮಸ್ಯೆಗಳಲ್ಲೇ ಮುಳುಗಿರುವಾಗ ಕಾಂಗ್ರೆ ಮುಖಂಡರು ನಿದ್ರೆಯಿಲ್ಲದ ರಾತ್ರಿ ಕಳೆಯುವಂತಾಗಿದೆ. ಆಂಧ್ರ –ಕರ್ನಾಟಕಗಳೆರಡು ತನ್ನ ಅವಳಿ-ಜವಳಿ ದತ್ತಕ ಪುತ್ರರು, ಮುಂಬರುವ ಚುನಾವಣೆಯಲ್ಲಿ ಕೈಬಿಟ್ಟದ್ದಾದರೆ ಇಡೀ ದೇಶವೇ ತಮ್ಮನ್ನು 1977 ರಂತೆ ಪರದೇಶಿ ಮಾಡಬಹುದಲ್ಲ ಎಂಬ ಭೀತಿ ಕಾಂಗ್ರೆ ಹೈಕಮಾಂಡನ್ನಾವರಿಸಿದೆ. ಅವರ ಈ "ಭೀತಿ" ನಿಜವಾಗಿದೆ. ನಿಮ್ಮನ್ನೂ ನಿಮ್ಮ ಜನವಿರೋಧಿ ನೀತಿಯನ್ನು ಕರ್ನಾಟಕದಿಂದ ದೂರ ಮಾಡುತ್ತೇವೆಂಬ ಛಲದಿಂದ ಎಡ ಮತ್ತು ಇತರ ವಿರೋಧ ಪಕ್ಷಗಳು ಜನತಾ ಚಳವಳಿ ನಡೆಸಿ ಮತದಾರರ ವಿಶ್ವಾಸಗಳಿಸಲು ದುಡಿಯುವುದಗತ್ಯ.

ಗುಂಡೂರಾಯರ ಆಹ್ವಾನ- ಚುನಾವಣೆಯನ್ನೆದುರಿಸಿರಿ

"ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಆದ ಪ್ರಗತಿ ಹಾಗೂ ನಮ್ಮ ಸಾಧನೆ ಬಗ್ಗೆ ತೀರ್ಪು ನೀಡಲು ಜನತೆಗೆ ಬಿಟ್ಟು ಬಿಡಿ; ಚುನಾವಣೆಯನ್ನೆದುರಿಸಿ. ಫಲಗೊತ್ತಾಗುತ್ತದೆ." ಗುಂಡೂರಾಯರ ಧೀರವಾಣಿ ಇದು. ಸಂದರ್ಭ: ರಾಜ್ಯದ ವಿರೋದ ಪಕ್ಷಗಳ [ನಾಯಕರ ಕೆಲವು ಬೇಡಿಕೆಗಳ ಕುರಿತು ಮುಖ್ಯ ಮಂತ್ರಿಯವರ ಉತ್ತರ.

ಕರ್ನಾಟಕದಲ್ಲಿ ಎಡ ಪಕ್ಷಗಳು, ವಿರೋಧ ಪಕ್ಷ ಮತ್ತು ಪ್ರಜಾಪ್ರಭುತ್ವ ಚಳವಳಿ ಪ. ಬಂಗಾಲ, ಕೇರಳ, ತ್ರಿಪುರಾಗಳಂತೆ ಪ್ರಭಲವಾಗಿಲ್ಲೆಂಬ ಸಂಗತಿ ಗುಂಡೂರಾಯರಿಗೆ ಚೆನ್ನಾಗಿ ಗೊತ್ತು. ಅದ್ದರಿಂದ ನಮ್ಮಲ್ಲಿ ತಿಳುವಳಿಕೆಯಿಂದ ಮತದಾನವಾಗುತ್ತಿಲ್ಲ. ಜಾತಿ, ಮಠಾಧೀಶರು, ಹಣ, ಕುಡಿತಗಳೇ ಚುನಾವಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿವೆಂದೂ ರಾಯರಿಗೆ ತಿಳಿದ ಸಂಗತಿ. ವಿರೋಧ ಪಕ್ಷಗಳಲ್ಲೊಂದಾದ ಭಾರತೀಯ ಜನತಾ ಪಾರ್ಟಿ ಕೊನೆಗಳಿಗೆಯಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸಿ, "ನಾವು ಅಧಿಕಾರಕ್ಕೆ ಬರುವ ತನಕ ಇಂದಿರಾ ಗಾಂಧಿಯೇ ಆಡಳಿತೆ ನಡೆಸಿಕೊಂಡು ಹೋಗಲಿ" ಎಂಬ ಆ ಪಕ್ಷದ ಅಖಿಲ ಭಾರತ ತಿಳುವಳಿಕೆಯಂತೆ ವಿರೋಧ ಮತಗಳನ್ನು ಒಡೆದು ತಮಗೆ ಸಹಾಯ ಮಾಡುವರೆಂಬ ಊಹೆ ಗುಂಡೂರಾಯರಿಗಿದೆ. ಅದ್ದರಿಂದ ಹಣ, ಜಾತಿ, ಮಠಾಧಿಪತಿಗಳು, ಕಂಟ್ರಾಕ್ಟರರೆಲ್ಲ ತನ್ನ ಹಿಡಿತದಲ್ಲಿರುವಾಗ, "ಬನ್ನಿ ಚುನಾವಣೆಯನ್ನೆದುರಿಸಿರಿ. ಜನತೆಯ ತೀರ್ಪು ನೋಡಿರೆಂಬ" ಆಹ್ವಾನ ಕೊಡುವುದರಲ್ಲಿ ಆಶ್ಚರ್ಯವೇನಿಲ್ಲ. ಇದೇ ಆಹ್ವಾನವನ್ನು ವಿರೋಧ ಪಕ್ಷಗಳೂ ಗುಂಡೂರಾಯರ ಮುಂದೆ ಮಂಡಿಸುತ್ತಲೇ ಬಂದಿದ್ದಾರೆ. "ನಗರ ಕಾರ್ಪೊರೇಶನ್, ನಗರ ಸಭೆ, ಪಂಚಾಯಿತಿ, ಸೊಸೈಟಿಗಳ ಚುನಾವಣೆ ನಡೆಸಿರಿ" ಎಂದು. ಅದು ಸದ್ಯ ಸಾಧ್ಯವಿಲ್ಲ. ವಿಧಾನ ಸಭೆ ಚುನಾವಣೆಯ ನಂತರವೇ ಆ ವಿಚಾರವೆಂದು ರಾಯರ ವಾದ.

ಅಂತೂ ಅತಿ ಬುದ್ಧಿವಂತ ಬಂಡವಾಳಶಾಹಿ ಪ್ರತಿನಿಧಿ ಗುಂಡೂರಾಯರು. ಐಕ್ಯ ಹೋರಾಟಗಳೂ ನಡೆಯುತ್ತಿವೆ, ಜನಜಾಗೃತರಾಗುತ್ತಿದ್ದಾರೆ. ಅದರ ಉಪಯೋಗವನ್ನು ವಿರೋಧ ಪಕ್ಷಗಳು ಮಾಡಿಕೊಳ್ಳಬೇಕು. ಗುಂಡೂರಾಯರಿಗೆ ಸವಾಲಾಗಿ ನಿಲ್ಲಬೇಕು.

ಹರಿಹರ :

ಕಾರ್ಮಿಕ ಸಂಘಗಳ ಸಮಾವೇಶ

ಗ್ವಾಲಿಯರ್ ರೇಯಾನ್ಸ್‌ನ ವಿವಿಧ ಘಟಕಗಳಲ್ಲಿರುವ ಕಾರ್ಮಿಕ ಸಂಘಗಳ ಸಮಾವೇಶವನ್ನು ನವೆಂಬರ್ 21 ರಂದು ಹರಿಹರದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಪ್ರತಿಯೊಂದು ಸಂಘಗಳ ಪ್ರತಿನಿಧಿಗಳ ಸಿದ್ಧತಾ ಸಭೆ 20-11-82 ರಂದು ನಡೆಯಲಿದೆ.

ಹರಿಹರ ಪಾಲಿಫೈಬರ್‌ನಲ್ಲಿರುವ ಕಾಯಂ ಕೆಲಸಗಾರರ, ಸಿಬ್ಬಂದಿ (ಸ್ಟಾಫ್)ಗಳ, ಕಾಂಟ್ರಾಕ್ಟ್ ಕೆಲಸಗಾರರ, ಕಾಲೋನಿ ಕೆಲಸಗಾರರ ಮತ್ತು ಗ್ರಾಸಲೇನ್ ಡಿವಿಜನ್‌ನ ಸಂಘಟನೆಗಳು ಈ ಸಮಾವೇಶವನ್ನು ಏರ್ಪಡಿಸಿವೆ. ಈಗಾಗಲೇ ಸ್ವಾಗತ ಸಮಿತಿಯೊಂದು ರಚಿತವಾಗಿದ್ದು ಕಾಂ| ವಿ. ಜೆ. ಕೆ. ನಾಯರ್ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಎ.ಐ.ಟಿ.ಯು.ಸಿ. ನೇತೃತ್ವದ ಗ್ರಾಸಲೇನ್ ಡಿವಿಜನ್‌ನಲ್ಲಿರುವ ಕಾರ್ಮಿಕ ಸಂಘವೂ ಸ್ವಾಗತಿ ಸಮಿತಿಯಲ್ಲಿ ಪಾಲ್ಗೊಂಡಿದೆ.

ಹರಿಹರ, ನಾಗ್ಡಾ, ಗ್ವಾಲಿಯರ್, ಮಾವೂರ ಮತ್ತಿತರ ಕಡೆಗಳಲ್ಲಿರುವ ಗ್ವಾಲಿಯರ್ ರೇಯಾನ್ಸ್ ಘಟಕಗಳ ಕಾರ್ಮಿಕರ ಐಕ್ಯತೆ, ಐಕ್ಯ ಕಾರ್ಯಾಚರಣೆಗೆ ರೂಪಕೊಡಲು ಈ ಸಮಾವೇಶ ಪ್ರಮಿಸಲಿದೆ, ಹಾಗೂ ಅಖಿಲ ಭಾರತ ಮಟ್ಟದಲ್ಲಿ ಕೋ-ಆರ್ಡಿನೇಶನ್ ಕಮಿಟಿಯೊಂದನ್ನು ರಚಿಸುವ ಸಾಧ್ಯತೆ ಇದೆ. ಸಮಾವೇಶದಲ್ಲಿ ಪಾಲ್ಗೊಳ್ಳಲು ಈಗಾಗಲೇ ಆಹ್ವಾನ ಕಳಿಸಲಾಗಿದೆ.

ಮುಷ್ಕರ ಮುಂದುವರಿಕೆ :

17-10-82 ರಿಂದ ಪ್ರಾರಂಭವಾದ ಹರಿಹರ ಪಾಲಿಫೈಬರ್ ಕಾರ್ಮಿಕರ ಮುಷ್ಕರ ಇನ್ನೂ ಮುಂದುವರೆದಿದೆ. ಆಡಳಿತವರ್ಗ ಮಾತುಕತೆಗಳಲ್ಲಿ ಪಾಲ್ಗೊಳ್ಳುತ್ತಿಲ್ಲ.

ಸುಮಾರು ಎರಡು ಸಾವಿರಕ್ಕೂ ಮಿಕ್ಕಿ ಇರುವ ಕೆಲಸಗಾರರು ಹೋರಾಟ ಮುಂದುವರೆಸುವ ದೃಢ ನಿಶ್ಚಯದಲ್ಲಿದ್ದಾರೆ.

○

ನನ್ನ ಭೂಗತ ಜೀವನದ ದಿನಗಳು

—ಇ. ಕೆ. ನಾಯನಾರ್

(ಕಳೆದ ಸಂಚಿಕೆಯಿಂದ)

ಮರುದಿನ ಮುಂಜಾನೆ ಎದ್ದು ನಾವು ಅಡಗಿಕೊಂಡಿದ್ದ ಜಾಗದಿಂದ ಹೊರಬಿದ್ದೆವು. ನೀರನ್ನು ಹುಡುಕುತ್ತಾ ಹೊರಟೆವು. ಗಿರಿಯ ಝರಿಯೊಂದರ ಬಳಿ ನಮ್ಮ ಪ್ರಾತಃಕರ್ಮಗಳನ್ನು ಮುಗಿಸಿದೆವು. ಮುಂದೆ ನಡೆಯಲು ನಿಶ್ಶಕ್ತರಾಗಿ ಸ್ವಲ್ಪ ನೀರನ್ನು ಕುಡಿದು ಅಲ್ಲಿಯೇ ಕುಳಿತೆವು. ಮಧ್ಯಾಹ್ನದ ವೇಳೆಗೆ ಕಾಡಿನೊಳಗೆಲ್ಲಿಂದಲೋ ಸಿಗ್ನಲ್ ಕೇಳಿ ಬಂತು. ನಾವೂ ಕೂಗಿನ ಮೂಲಕ ಉತ್ತರಿಸಿದೆವು. ಮೂರು ಗಂಟೆಯ ವೇಳೆಗೆ ಅವನು ನಮ್ಮನ್ನು ತಲುಪಿದ್ದ. ಅವನು ನಮ್ಮನ್ನು ಹುಡುಕುತ್ತಾ ಅಲೆದಾಡುತ್ತಿದ್ದನು. ಅವನು ನಮಗೋಸ್ಕರ ತಂದಿದ್ದ ಪುಜುಕ್ಕು (ಕೆಲಸಗಾರರು ಊಟದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಬಾಳೆಕಾಯಿ, ಗೆಣಸು, ಬೇಳೆಯಿಂದ ತಯಾರಿಸಿದ ಖಾದ್ಯ) ಸಹ ಹಳಸಿ ಹೋಗಿತ್ತು. ಆದರೆ ನಮ್ಮ ಹಸಿದ ಹೊಟ್ಟೆಗಳಿಗೆ ಅದು ಬಹಳ ರುಚಿಕರವಾಗಿ ಕಂಡಿತು. ಅವನು ಆತುರಾತುರವಾಗಿ ಹೊರಟನು. ಹೋಗುವ ಮುನ್ನ "ಈ ಸ್ಥಳವು ಅಡಗಿಕೊಳ್ಳಲು ಸೂಕ್ತವಲ್ಲ. ನೀವು ಬೆಟ್ಟದ ಆ ಭಾಗಕ್ಕೆ ಹೋಗಬೇಕು. ಸಾಮಾನ್ಯವಾಗಿ ಪೋಲೀಸರು ಆ ಪ್ರದೇಶಕ್ಕೆ ಹೋಗುವುದಿಲ್ಲ" ಎಂದು ಹೇಳಿ ಹೋದನು. ಕಾಡಿನೊಳಗೆ ಬೆಟ್ಟದ ಇನ್ನೊಂದು ಭಾಗಕ್ಕೆ ಹೋಗುವುದು ಅಷ್ಟು ಸುಲಭವಾಗಿರಲಿಲ್ಲ. ದಾರಿಯೇ ಇರಲಿಲ್ಲ. ಇಡೀ ಪ್ರದೇಶವು ಮುಳ್ಳಿನ ಪೊದೆಗಳಿಂದ ಆವರಿಸಿತ್ತು. ಈ ಮುಳ್ಳಿನ ಗಿಡಗಳನ್ನು ಕೋಲಿನಿಂದ ಸರಿಸಿ ಜಾಗ ಮಾಡಿಕೊಂಡು ಹೋಗಬೇಕಾಗಿತ್ತು. ನಮ್ಮಲ್ಲಿ ಒಬ್ಬ ಸಂಗಾತಿಯೂ ಮುಂದೆ ಹೆಜ್ಜೆ ಇಡಲೂ ಆಗದಷ್ಟು ಸುಸ್ತಾಗಿದ್ದರು. ಅವರು ತಮ್ಮ ಕೊಡೆಯನ್ನು ಊರುಗೋಲಾಗಿ ಮಾಡಿಕೊಂಡು ಕಾಲೆಳೆದುಕೊಂಡು ಬರುತ್ತಿದ್ದರು. ಆದರೆ ನಾವು ಅಲ್ಲಿ ಇನ್ನು ಉಳಿಯುವಂತಿರಲಿಲ್ಲ ಹೇಗಾದರೂ ಮುಂದೆ ಹೋಗಲೇಬೇಕಾಗಿತ್ತು.

ಕಾಡನ್ನು ದಾಟಿ ಆ ಕಡೆಯ ಹಳ್ಳಿಯನ್ನು ತಲುಪಿದರೆ ವಿಶ್ರಾಂತಿಗೆ ಏರ್ಪಾಡು ಮಾಡಬಹುದೆಂದು ನಾನು ನನ್ನ ಸಂಗಾತಿಗಳಿಗೆ ಹೇಳಿದೆ. ಕಾಡಿನಲ್ಲಿ ಅಲೆಯುವುದು ನಿಷ್ಪ್ರಯೋಜಕವಾಗಿತ್ತು. ಹಳ್ಳಿಯನ್ನು ತಲುಪಿದರೆ ಆ ಹಳ್ಳಿಯಲ್ಲೂ ಪಾರ್ಟಿ ಚಟುವಟಿಕೆ ಮುಂದುವರಿಸಬಹುದಾಗಿತ್ತು. ನಮ್ಮ ಧೋತಿ ಮತ್ತು ಶರ್ಟುಗಳೆಲ್ಲಾ ಹರಿದು ಚಿಂದಿಯಾಗಿದ್ದವು. ಸೂರ್ಯನ ಉರಿಬಿಸಿಲಿನಿಂದಾಗಲಿ, ರಾತ್ರಿಯ ಕೊರೆಯುವ ಚಳಿಯಿಂದಾಗಲಿ ಈ ಉಡುಪಿನಿಂದ ಯಾವ ರಕ್ಷಣೆಯೂ ದೊರೆಯಲಿಲ್ಲ. ಹೊಟ್ಟೆಗೆ ತಿನ್ನಲು ಆಹಾರವಿರಲಿಲ್ಲ. ಬಾಯಾರಿಕೆಯಾದಾಗ ಕಾಡಿನ ಝರಿಯ ನೀರನ್ನು ಕುಡಿಯುತ್ತಿದ್ದೆವು. ನಮ್ಮ ಮನೋಬಲದಿಂದಲೇ ನಾವು ಈ ಪ್ರಯಾಸಕರವಾದ ಪ್ರಯಾಣವನ್ನು ಮುಗಿಸಲು ಸಾಧ್ಯವಾಯಿತು.

ದನಗಾಹಿಗಳಿಂದ ನಮಗೆ ಯಾವುದೇ ಸೂಚನೆ ಬರಲಿಲ್ಲ. ನಮಗೆ ಆ ಹುಡುಗರ ಸಂಪರ್ಕ ಸಂಪೂರ್ಣ ಕಡಿದು ಹೋಯಿತು. ಹೊರಗಿನ ಪ್ರಪಂಚದ ಬಗ್ಗೆ ನಮಗೆ ಈಗ ಏನೂ ತಿಳಿದಿರಲಿಲ್ಲ. ಮನೆಗಳಲ್ಲಿದ್ದ ಸಂಗಾತಿಗಳಿಗೂ ನಾವು ಎಲ್ಲಿದ್ದೇವೆಂದು ತಿಳಿದಿರಲಿಲ್ಲ. ಅವರ ಸಂಗಡ ನಾವು ಕೂಡಲೇ ಸಂಪರ್ಕ ಪಡೆಯಬೇಕಿತ್ತು. ನಾವು ನಿಧಾನವಾಗಿ ಕಾಡಿನ ಗಡಿಯತ್ತ ಹೊರಟೆವು. ಮಧ್ಯಾಹ್ನ 3-30 ಗಂಟೆಯ ಸಮಯವಿರಬಹುದು. ನಾವು ಸುತ್ತಮುತ್ತ ಕಣ್ಣಾಡಿಸಿ ಹಳ್ಳಿಗೆ ಹೋಗಲು ತೀರ್ಮಾನಿಸಿ ಹೊರಟೆವು.

ಕಾಲುದಾರಿಯಲ್ಲಿ ನಾವು ನಿಧಾನವಾಗಿ ಹಳ್ಳಿಯ ಕಡೆ ನಡೆಯುತ್ತಿದ್ದೆವು. ನಾವು ತಿರುವಿನಲ್ಲಿ ತಿರುಗಿಕೊಂಡು ನಡೆಯುತ್ತಿರುವಾಗ ನಮ್ಮ ದಾರಿಯಲ್ಲಿ ಪೋಲೀಸನೊಬ್ಬನು ನಿಂತಿರುವುದನ್ನು ಕಂಡು ಆವಕ್ಕಾದೆವು. ಅವನು ಒಂದು ಮರಕ್ಕೆ ಒರಗಿಕೊಂಡು ನಿಂತಿದ್ದನು. ಅವನೂ ನಮ್ಮನ್ನು ನೋಡಿದನು. ನಾನು ನನ್ನ ಕೊಡೆಯನ್ನು ಎತ್ತಿ ಹಿಡಿದೆನು.

ನಾವು ಬಂದೂಕು ಹಿಡಿದು ಹೋಗುತ್ತಿದ್ದೇವೆಂದು ತಿಳಿದು ಆ ಪೋಲೀಸ್ ಪೇದೆಯು ಭೀತಿಯಿಂದ ತನ್ನ ಸಹೋದ್ಯೋಗಿಗಳನ್ನು ಬರ ಮಾಡಿಕೊಳ್ಳಲು ಸೀಟಿ ಊದಿದನು. ನಾವು ತಿರುಗಿ ಕಾಡಿನೊಳಕ್ಕೆ ಓಡಿದೆವು. ಬಹಳ ದೂರ ಓಡಿದರೂ ಕ್ಷೇಮವೆನಿಸಲಿಲ್ಲ. ಸಮೀಪಿಸುತ್ತಿದ್ದ ಬೂಟುಕಾಲಿನ ಶಬ್ದ ಕಾಡಿನಲ್ಲೆಲ್ಲಾ ಪ್ರತಿಧ್ವನಿಸಿತು. ತಕ್ಷಣ ನಾವು ಪಕ್ಕದಲ್ಲೇ ಇದ್ದ ಪೊದೆಯ ಸಂದಿಯಲ್ಲಿ ನಿಶ್ಚಲರಾಗಿ ಬಿದ್ದುಕೊಂಡೆವು. ಗುರುತು ಸಿಗಬಾರದೆಂದು ನಮ್ಮ ತಲೆಗಳನ್ನು ತಗ್ಗಿಸಿಕೊಂಡೆವು. ಭಾರವಾದ ಬೂಟುಗಳ ಶಬ್ದ ನಮಗೆ ಸಮೀಪವಾಗುತ್ತಾ ಬಂತು. ಪೋಲೀಸ್ ಪೇದೆಯ ಸೀಟಿ ಕೇಳಿ ಬಂದ ಕಡೆಗೆ ಇವರೆಲ್ಲಾ ಓಡುತ್ತಿದ್ದರು. ಅವರು ಅಷ್ಟೊಂದು ಆತುರದಲ್ಲಿರದಿದ್ದರೆ ನಮ್ಮನ್ನು ಗುರುತಿಸಬಹುದಿತ್ತು'. ಕಾಲಿನ ಸಪ್ಪಳ ದೂರವಾಯಿತು. ಎಲ್ಲವೂ ಸ್ಥಿಮಿತಕ್ಕೆ ಬಂದ ಮೇಲೆ ಎದ್ದು ವೇಗವಾಗಿ ನಡೆಯಲಾರಂಭಿಸಿದೆವು.

ನಾವು ಕಾಡನ್ನು ತೊರೆದು ಹಳ್ಳಿಯಲ್ಲಿ ಆಶ್ರಯ ಪಡೆಯಲು ನಿಶ್ಚಯಿಸಿದೆವು. ಕಾಡಿನಲ್ಲಿ ಉಳಿಯುವುದು ಕಷ್ಟಕರವಾಗಿತ್ತು. ಕೂಡಲೇ ನಾವು ಹಳ್ಳಿಯ ಕಾಲು ದಾರಿಯನ್ನು ತಲುಪಿದೆವು. ದನಗಾಹಿಗಳು ಮತ್ತು ಕಟ್ಟಿಗೆ ಹೊಡೆಯುವವರ ದಾರಿಯಾಗಿದ್ದ ಈ ಕಾಲುದಾರಿಯು ಗಿಡಗಂಟಿಗಳಿಂದ ಕೂಡಿದ ಕಿರುದಾರಿಯಾಗಿತ್ತು. ಪೋಲಿಸರು ನಮ್ಮನ್ನು ಹುಡುಕಿಕೊಂಡು ಕಾಡಿನೊಳಕ್ಕೆ ಬಹುದೂರ ಹೋಗಿರುವರೆಂದು ಖಾತ್ರಿಮಾಡಿಕೊಂಡು ನಾವು ವೇಗವಾಗಿ ಹೋಗಲಾರಂಭಿಸಿದೆವು.

ನಾವು ಕಾಡಿನ ಗಡಿಯನ್ನು ಸಮೀಪಿಸುತ್ತಿದ್ದಂತೆ ಮರವೊಂದರ ಬಳಿಯಲ್ಲಿ ಪೋಲೀಸರ ಗೂಂಡಾ ಒಬ್ಬನು ನಿಂತಿರುವುದು ಕಂಡಿತು. ನಾವು ಅವನನ್ನು ಸಮೀಪಿಸುತ್ತಿದ್ದಂತೆ ಕಕ್ಷಣ ನಮ್ಮನ್ನು ನೋಡಿದನು. ನಮ್ಮ ಹಠಾತ್ ದರ್ಶನ ಮತ್ತು ಕಾಡಿನೊಳಗಿದ್ದ ಸಂಗಾತಿಗಳ ಬಳಿ ಬಂದೂಕು ಮತ್ತಿತರ ಅಸ್ತ್ರಗಳಿವೆಯೆಂಬ ಗಾಳಿ ಸುದ್ದಿಯು ಆ ಧಡೂತಿ ವ್ಯಕ್ತಿಗೆ ಪ್ರಾಣಭಯವುಂಟಾಯಿತು.

ನನ್ನ ಪಕ್ಕದಲ್ಲಿದ್ದ ಸಂಗಾತಿಯು "ಗುಂಡು ಹಾರಿಸಿ, ನೀವು ಇನ್ನೂ ಏಕೆ ಹಿಂದು ಮುಂದು ನೋಡುತ್ತಿದ್ದೀರಿ?" ಎಂದು ನನಗೆ ಹೇಳಿದರು. "ಇಲ್ಲ ಅವನೂ ನಮ್ಮಂತೆ ಒಬ್ಬ. ತನ್ನ ಹೊಟ್ಟೆ ಪಾಡಿಗೆ ಈ ಕೆಲಸ ಮಾಡುತ್ತಿದ್ದಾನೆ. ಅವನಿಗೂ ಹೆಂಡತಿ, ಮಕ್ಕಳಿದ್ದಾರೆ. ನಮಗೆ ಬೇಕಾಗಿರುವುದು ಇಲ್ಲಿಂದ ಮುಂದೆ ಹೋಗುವುದು. ಹೌದಲ್ಲವೇ? ಈ ಬಡಪಾಯಿ ಮನುಷ್ಯನಿಗೇಕೆ ನಾವು ತೊಂದರೆ ಕೊಡಬೇಕು.

"ಹೋಗಲಿ, ಹಾಗಾದರೆ ಅವನು ತನ್ನ ಕೈಗಳನ್ನೆತ್ತಿ ನಮ್ಮ ಕಡೆ ಬೆನ್ನು ಮಾಡಿ ನಿಲ್ಲಲಿ. ನಮನ್ನು ನೋಡಿದ್ದಾಗಿ ಅವನ್ನು ಯಾರ ಮುಂದೆಯೂ ಬಾಯಿ ಬಿಚ್ಚಬಾರದು, ಇಲ್ಲವಾದರೆ...

ಆ ಗೂಂಡಾ ನಮ್ಮ ಕಡೆ ಬೆನ್ನು ತಿರುಗಿಸಿ ಕೈಗಳನ್ನೆತ್ತಿ ನಿಂತುಕೊಂಡನು "ದಯವಿಟ್ಟು ನನ್ನನ್ನು ಕೊಲ್ಲಬೇಡಿ, ನಾನು ಖಂಡಿತ ನಿಮಗೇನು ತೊಂದರೆ ಮಾಡೋಲ್ಲ."

"ಸರಿ, ಹಾಗಾದರೆ ನಾವು ಹೋಗುವವರೆಗೂ ನೀನು ಹಾಗೆಯೇ ನಿಂತಿರು ಇನ್ನೊಂದು ವಿಷಯ, ನಾವು ಈ ದಾರಿಯಲ್ಲಿ ಬಂದಿದ್ದು ಯಾರೊಬ್ಬರಿಗೂ ತಿಳಿಯಬಾರದು. ನಮ್ಮ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಿದಲ್ಲಿ ನೀನೇ ನಮಗೆ ದ್ರೋಹ ಬಗೆದಿರುವಿಯೆಂದು ನಿನ್ನನ್ನು ನಾವು ಕೊಂದು ಬಿಡುತ್ತೇವೆ. ಇಲ್ಲವಾದಲ್ಲಿ ನಿನಗೇನೂ ತೊಂದರೆಯಾಗುವುದಿಲ್ಲ."

"ನಾನು ನೀವು ಹೇಳಿದಂತೆ ಕೇಳುತ್ತೇನೆ" ಎಂದು ಅವನು ಒಪ್ಪಿಕೊಂಡನು. ನಾವು ಅವನಿಂದ ದೂರವಾಗಿ ಕಾಡಿನಿಂದಾಚೆ ನಡೆದೆವು. ನಾವು ಕಣ್ಮರೆಯಾದ ಮೇಲೆ ಅವನಿಗೆ ಕೂಗಿ ಹೇಳಿದೆವು "ನಾವು ನಮ್ಮ ಮಾತು ಉಳಿಸಿಕೊಂಡಿದ್ದೇವೆ. ನೀನೂ ಕೊಟ್ಟ ಮಾತು ಉಳಿಸಿಕೊಳ್ಳಬೇಕು." ಆಗಲಿ, ಅವನಿನ್ನೂ ಕೈಗಳನ್ನು ಎತ್ತಿ ಹಿಡಿದು ಆಕಡೆ ಮುಖ ತಿರುಗಿಸಿ ನಿಂತಿದ್ದನು. ನಮ್ಮ ಕಣ್ಣು ಮತ್ತು ಕಿವಿಗಳು ಚುರುಕಾದವು. ನಾವು ವೇಗವಾಗಿ ಎಚ್ಚರಿಕೆಯಿಂದ ಮುಂದೆ ಓಡಿದೆವು.

ಸ್ವಲ್ಪ ದೂರದಲ್ಲಿ ಮನೆಗಳು ಕಂಡು ಬಂದವು. ದನ ಕಾಯುತ್ತಿದ್ದ ಕೆಲವು ಹುಡುಗರು ನಮ್ಮನ್ನು ನೋಡಿದರು. ಅವರು ಗಟ್ಟಿಯಾಗಿ ಕೂಗಿ ಹಳ್ಳಿಗರಿಗೆ ಸೂಚನೆ ನೀಡಿದರು.

ದನಗಾಹಿಗಳ ಸೂಚನೆಯು ಬಹುಬೇಗ ತಲುಪಿ ನಮ್ಮ ಸಂಗಾತಿಗಳಿಗೆ ನಾವು ಬರುತ್ತಿರುವ ವಿಷಯ ಗೊತ್ತಾಯಿತು. ಆದರೆ ನಾವು ಕಾಡಿನಿಂದ ಹೊರಗೆ ಬರುತ್ತೇವೆಂಬುದನ್ನು ನಮ್ಮ ಸಂಗಾತಿಗಳು ನಂಬುವರೆಂದು ನಮಗೆ ಖಾತ್ರಿಯಿರಲಿಲ್ಲ ನಾವು ಅವರೆಡೆಗೆ ಹೋಗಬೇಕಾಗಿತ್ತು.

ನಾವು ಮೂವರೂ ಒಟ್ಟಿಗೆ ನಡೆಯುವುದು ಬಹಳ ಅಪಾಯಕಾರಿಯೆಂದು ನನಗೆ ಅನ್ನಿಸಿತು. ಇದು ನನ್ನೊಬ್ಬನ ಅಭಿಪ್ರಾಯವಾಗಿರಲಿಲ್ಲ. ಈ ಭಯ ಬೇರೆಯವರಿಗೂ ಇದ್ದುದರಿಂದ ನಾವು ಅಲ್ಲಿಂದ ಬೇರೆ ಬೇರೆ ದಿಕ್ಕಿನಲ್ಲಿ ಹೋಗಲು ತೀರ್ಮಾನಿಸಿದೆವು.

"ನಾನು ಉತ್ತರದಿಕ್ಕಿನಲ್ಲಿ ಹೊಸದುರ್ಗಕ್ಕೆ ಹೋಗಿ ಅಲ್ಲಿ ಆಶ್ರಯ ಪಡೆಯುತ್ತೇನೆ. ಪಾರ್ಟಿಯೊಡನೆ ಸಂಪರ್ಕ ಪಡೆಯುತ್ತೇನೆ." ಎಂದು ಒಬ್ಬ ಸಂಗಾತಿಯು ಹೇಳಿದರು.

"ಆಗಲಿ ಕಾಮ್ರೇಡ್, ನೀವಿನ್ನು ಹೋಗಿ, ನಾನು ಪೂರ್ವದಿಕ್ಕಿಗೆ ನಡೆದು ನಮ್ಮ ಸಂಗಾತಿಗಳನ್ನು ಸಂಪರ್ಕಿಸುತ್ತೇನೆ." ಎಂದು ನಾನು ಹೇಳಿದೆ.

ಮೂರನೆಯ ಸಂಗಾತಿ ಪಶ್ಚಿಮಕ್ಕೆ ಹೋಗಲು ನಿರ್ಧರಿಸಿದರು. ಹೀಗೆ ನಾವು ಮೂರು ದಿಕ್ಕಿಗೆ ಹೊರಟೆವು. ಬೆಟ್ಟಗಳ ಹಿಂಭಾಗದಲ್ಲಿ ಸೂರ್ಯನು ಅಸ್ತಮಿಸುತ್ತಿದ್ದನು. ಗುಡಿಸಲುಗಳ ಕೊಳವೆಗಳಿಂದ ಹೊಗೆ ಎದ್ದಿತು. ನನ್ನ ಸಂಗಾತಿಗಳಾಗಲೇ ಕಣ್ಮರೆಯಾಗಿ ಹೋಗಿದ್ದರು. ಅವರು ಬಹಳ ವೇಗವಾಗಿ ಹೋದರೆಂದು ಕಾಣಿಸುತ್ತದೆ ನಾನು ಕತ್ತಲಾಗುವವರೆಗೂ ನಿಧಾನವಾಗಿ ನಡೆದೆನು. ನನ್ನ ಉಡುಪು ಕೊಳಕಾಗಿ ಹರಿದು ಚಿಂದಿಯಾಗಿತ್ತು. ಆ ಉಡುಪು ನನ್ನ ಮಾನ ಮಾತ್ರ ಮುಚ್ಚಿತ್ತು.

ಸ್ವಲ್ಪ ದೂರ ನಡೆದ ಮೇಲೆ ನಾನು ಹಿಂತಿರುಗಿ ನೋಡಿದೆ. ಕಾಡು ಕತ್ತಲೆಯಿಂದ ಆವರಿಸಿತ್ತು. ನಾವು ಆ ಕಾಡಿನಲ್ಲೇ ಹದಿನೇಳು ದಿನಗಳನ್ನು ಕಳೆದಿದ್ದೆವು. ಹಳ್ಳಿಯಲ್ಲಿ ನಮಗೆ ಭಯಂಕರವಾದ ದಿಗ್ಭ್ರಮೆಯಿಂದ ಕೂಡಿದ ಸುದ್ದಿಗಳು ಕಾದಿದ್ದವು. ಪೋಲೀಸರು ದನಗಾಹಿ ಹುಡುಗರನ್ನು ಹಿಡಿದು ಹಿಂಸಿಸಿದ್ದರು. ಪೋಲೀಸರ ಹೊಡೆತದಿಂದ ಆ ಹುಡುಗರ ಶರೀರಗಳು ಕಪ್ಪು-ನೀಲಿ ಬಣ್ಣಕ್ಕೆ ತಿರುಗಿದ್ದವು. ಇಷ್ಟೊಂದು ಚಿತ್ರಹಿಂಸೆ ನೀಡಿದ್ದರೂ ಆ ಹುಡುಗರು ನಮ್ಮ ಸುಳಿವು ನೀಡಿರಲಿಲ್ಲ.

ನಮ್ಮಿಂದ ಹಿಂದೆ ಉಳಿದುಕೊಂಡಿದ್ದ ಮೂವರು ಸಂಗಾತಿಗಳು ಪೋಲೀಸರ ವಶರಾಗಿ ಚಿತ್ರಹಿಂಸೆಗೊಳಗಾಗಿದ್ದರು. ಕಾಡಿಗೆ ಸಮೀಪವಿದ್ದ ಹಳ್ಳಿಗಳವರಾರೂ ಪೋಲೀಸರ ಹಿಂಸೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಇನ್ನೂ ಕೆಲ ದಿನಗಳ ಕಾಲ ನಾನು ಪೋಲೀಸರಿಂದ ತಲೆ ಮರೆಸಿಕೊಂಡು ಬೆಟ್ಟದ ತುದಿಯಲ್ಲಿ ಉಳಿದುಕೊಂಡಿದ್ದೆ ಹಗಲು ವೇಳೆ ಬೆಟ್ಟದ ಮೇಲೆ ಬಂಡೆಗಳ ಹಿಂದೆ ಅವಿತುಕೊಂಡಿರುತ್ತಿದ್ದೆ. ಕಟ್ಟಿಗೆ ಸಂಗ್ರಹಿಸಲು ಅಲ್ಲಿಗೆ ಬರುತ್ತಿದ್ದ ಮಹಿಳೆಯರು ನನಗೆ ಊಟ ತಂದು ಕೊಡುತ್ತಿದ್ದರು. ರಾತ್ರಿ ವೇಳೆ ನಾನು ಯಾರದಾದರೂ ಮನೆಗೆ ಹೋಗಿ ಸ್ನಾನ ಮಾಡಿ, ಊಟ ಮಾಡಿ, ಕೆಲವೊಂದು ಬಾರಿ ಅಲ್ಲಿಯೇ ಮಲಗುತ್ತಿದ್ದೆನು. ಬಹಳಷ್ಟು ಮನೆಗಳಲ್ಲಿ ಗಂಡಸರೆಲ್ಲಾ ಪೋಲೀಸರಿಂದ ತಪ್ಪಿಸಿಕೊಳ್ಳಲು ತಲೆ ಮರೆಸಿಕೊಂಡು ಓಡಿ ಹೋಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ರೈತರ ಮನೆಗಳಿಗೆ ನಾನು ಭೇಟಿ ನೀಡಿ ಪ್ರೋತ್ಸಾಹಿಸಿದ್ದು ಪಾರ್ಟಿಗೆ ಒಂದು ಹೊಸ ಚೈತನ್ಯ ನೀಡಿತು.

(ಮುಗಿಯಿತು.)

[ಕಾಂ| ಇ. ಕೆ. ನಾಯನಾರ್ ಅವರ ನೆನಹುಗಳನ್ನೊಳಗೊಂಡ (ಆತ್ಮಚರಿತ್ರೆ) "ಮೈಸ್ಟ್ರಗಲ್ಸ್" ಎಂಬ ಪುಸ್ತಕವನ್ನು ವಿಕಾಸ್ ಪಬ್ಲಿಷಿಂಗ್ ಹೌಸ್‌ನವರು ಪ್ರಕಟಿಸಿದ್ದಾರೆ. (ಬೆಲೆ 75 ರೂ) ಈ ಪುಸ್ತಕದ ಅಧ್ಯಾಯವೊಂದು ಇಂಗ್ಲೀಷ್ ಸಾಪ್ತಾಹಿಕ "ಆನ್‌ಲುಕರ್"ನಲ್ಲಿ ಪ್ರಕಟವಾಗಿತ್ತು. ಈ ಭಾಗವನ್ನು ಕಾಂ|| ಆರಾಧ್ಯ ಐಕ್ಯರಂಗಕ್ಕೆ ಅನುವಾದಿಸಿ ಕೊಟ್ಟಿದ್ದಾರೆ.

ಇಡೀ ಪುಸ್ತಕವನ್ನು ಅನುವಾದಿಸಿ ಐಕ್ಯರಂಗದಲ್ಲಿ ಪ್ರಕಟಿಸಬೇಕೆಂದು ಓದುಗರು ಒತ್ತಾಯ ಪಡಿಸುತ್ತಿದ್ದಾರೆ. ಸಧ್ಯದ ಸಂದರ್ಭದಲ್ಲಿ ಈ ಕಾರ್ಯ ಸಾಧ್ಯವಾಗದೆಂದು ಈ ಮೂಲಕ ತಿಳಿಸುತ್ತಿದ್ದೇವೆ.

ಅಕ್ಟೋಬರ್ 24 ರಿಂದ ಆರಂಭವಾದ "ನನ್ನ ಭೂಗತ ಜೀವನದ ದಿನಗಳು" ಲೇಖನ ಸರಣಿ, ಕಾಂ|| ನಾಯನಾರ್ ಅವರ ಆತ್ಮಚರಿತ್ರೆಯ ಒಂದು ಭಾಗ ಮಾತ್ರ ಎಂಬುದನ್ನು ಮತ್ತೊಮ್ಮೆ ನೆನಪಿಸುತ್ತಿದ್ದೇವೆ.]

ಅಖಿಲ ಭಾರತ ಕಿಸಾನ್ ಸಭಾದ ೨೪ನೆಯ

ಮೂರುವರೆ ವರ್ಷಗಳ ಹಿಂದೆ ವಾರಣಾಸಿಯಲ್ಲಿ 23ನೆಯ ಸಮ್ಮೇಳನವು ನೇರಿತ್ತು. ಈಗ 24ನೆಯ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನವು ಮಿಡ್ನಾಪುರ (ಪಶ್ಚಿಮ ಬಂಗಾಳ) ದಲ್ಲಿ ನವೆಂಬರ್ 8 ರಿಂದ 11ರ ವರೆಗೆ ನಡೆಯಿತು. ಹಿಂದೆಂದೂ ಬೆಳೆದು ಬರದಿರದಷ್ಟು ದೊಡ್ಡ ಪ್ರಮಾಣದಲ್ಲಿ ದೇಶವ್ಯಾಪ್ತಿ ರೈತ ಹೋರಾಟ ಬೆಳೆದು ಬಂದಿರುವ ಹಿನ್ನೆಲೆಯಲ್ಲಿ ಸೇರಿದ್ದ ಈ ಅಖಿಲ ಭಾರತ ಕಿಸಾನ್ ಸಮ್ಮೇಳನವು ಅತ್ಯಂತ ಮಹತ್ವಪೂರ್ಣ ಯಶಸ್ವಿ ಮೈಲುಗಲ್ಲಾಗಿದೆ. ಸಮ್ಮೇಳನದ ನಿರ್ಣಯಗಳು ಇನ್ನು ಮುಂದೆ ಭಾರತದಲ್ಲಿ ಐಕ್ಯ, ಬಲಿಷ್ಠ ದೇಶವ್ಯಾಪಿ ರೈತ ಹೋರಾಟ ಕಟ್ಟಿ ಬೆಳೆಸಲು ಸೂಕ್ತ ಮಾರ್ಗಸೂಚಿ ಆಗಬಲ್ಲವುಗಳಾಗಿವೆ.

23ನೇ ಕಿಸಾನ್ ಸಭಾ ಸಮ್ಮೇಳನವು ರೈತಾಪಿವರ್ಗದ ಹೋರಾಟ, ಸಂಘಟನೆ ಹೇಗೆ ಕಟ್ಟಿ ಬೆಳೆಸಬೇಕೆನ್ನುವುದರ ಬಗ್ಗೆ ಇದ್ದ ಜನಾಭಿಪ್ರಾಯಗಳಿಗೆಲ್ಲಾ ಸಮರ್ಪಕ ರೀತಿಯಲ್ಲಿ ಉತ್ತರ ಹುಡುಕಿದ್ದೇ ಅಲ್ಲದೆ ಮುಂದೆ ರೈತ ಹೋರಾಟಕ್ಕೆ ನಿರ್ಣಾಯಕವಾಗಿರುವ ನಿರ್ಣಯಗಳನ್ನು ತೆಗೆದುಕೊಂಡು ರೈತ ಹೋರಾಟ ಸಂಘಟನೆಯ ಇತಿಹಾಸದಲ್ಲಿ ವಾರಣಾಸಿ ಸಮ್ಮೇಳನ ಚಿರಸ್ಮರಣೀಯವಾಗಿ ಉಳಿಯುವಂತಾಗಿದೆ. ವಾರಣಾಸಿ ಸಮ್ಮೇಳನದ ನಂತರ ಈ ಮೂರುವರೆ ವರ್ಷಗಳ ಅವಧಿಯಲ್ಲಿ ಅನೇಕ ರಾಜ್ಯಮಟ್ಟದ ಮತ್ತು ದೇಶಮಟ್ಟದ ಐಕ್ಯ ಮತ್ತು ತೀವ್ರ ರೈತ ಹೋರಾಟಗಳು ಬೆಳೆದು ಬಂದಿವೆ. ಈ ಮಿಡ್ನಾಪುರ ಸಮ್ಮೇಳನವು ವಾರಣಾಸಿ ಸಮ್ಮೇಳನದ ಮೂಲಭೂತ ತಿಳುವಳಿಕೆಯನ್ನು ಇನ್ನೂ ವಸ್ತುನಿಷ್ಠವಾಗಿ ನಿಖರವಾಗಿ ಸಮೃದ್ಧಿಗೊಳಿಸಿ ಇಂದಿನ ಪರಿಸ್ಥಿತಿಯನ್ನು ಹೆಚ್ಚು ಸ್ಪಷ್ಟವಾಗಿ ಗುರ್ತಿಸಿ ಮುನ್ನಡೆದಿದೆ. ಮುಖ್ಯ ಸಮಸ್ಯೆಗಳನ್ನು, ತುರ್ತು ಕರ್ತವ್ಯಗಳನ್ನು ನಿರ್ದಿಷ್ಟಪಡಿಸಿಕೊಳ್ಳುವುದರಲ್ಲಿ ಹೆಚ್ಚು ಸ್ಪಷ್ಟತೆಯನ್ನು ಹೊಂದಿದೆ.

ಪರಿಸ್ಥಿತಿ

ತೀವ್ರ ಬರಗಾಲ, ನೆರೆ ಮತ್ತು ಹವಾಗುಣಗಳ ಅನಿಶ್ಚತೆಯೊಂದು ಇನ್ನೂ ತೀವ್ರ ತುರ್ತು ಸಮಸ್ಯೆಯಾಗಿಯೇ ಉಳಿದಿರುವುದು. ಎಷ್ಟು ಆಧುನಿಕ ಕೃಷಿ ಬೇಸಾಯ ಪದ್ಧತಿಗಳನ್ನು ಜಾರಿಗೊಳಿಸಿದರೂ ಕೃಷಿ ಉತ್ಪನ್ನದಲ್ಲಿ ಹಿಂಜರಿತ ಉಂಟಾಗಿರುವುದು. ಕೃಷಿ ಉತ್ಪನ್ನಕ್ಕೆ ಹಿಂದೇಟು ಬಿದ್ದಾಗಿಯೂ ಕೃಷಿಯಲ್ಲಿ ಪರಿಣಾಮಕಾರಿ ರೀತಿಯಲ್ಲಿ ಉತ್ಪಾದನಾ ಸಂಬಂಧಗಳನ್ನು ಸ್ಥಿತ್ಯಂತರಗೊಳಿಸಿದ್ದುದೇ ಕಾರಣವಾಗಿದ್ದರೂ, ಆಳುವ ವರ್ಗಗಳು ಭೂ ಸುಧಾರಣೆಯನ್ನು ಕೈಬಿಟ್ಟಿರುವುದು; ದಿನೇ ದಿನೇ ರೈತಾಪಿಜನರ ಕೃಷಿ ಕೂಲಿಕಾರರ, ಬಡ ರೈತರ ಜೀವನ ಪರಿಸ್ಥಿತಿ ಹದಗೆಡುತ್ತಿರುವುದು; ಕೃಷಿ ಉತ್ಪತ್ತಿಗೆ ಬೆಲೆ ಸವೆಯುತ್ತಾ ಹೋಗಿ ಕೃಷಿಗೆ ತಗಲುವ ಖರ್ಚಿಗಿಂತಲೂ ಕಡಿಮೆ ಉತ್ಪನ್ನ ದೊರಕುವಂತಾಗಿ ರೈತಾಪಿ ವರ್ಗಕ್ಕೆ ಮೋಸ ಉಂಟಾಗುವುದು; ದಿನೇ ದಿನೇ ಕೃಷಿ ಉತ್ಪಾದನಾ ಖರ್ಚು ಹೆಚ್ಚುತ್ತಲಿರುವುದು; ಮತ್ತು ಸಾಲ ಸವಲತ್ತು ಸಿಕ್ಕದಿರುವುದು; ಬಡ ಮತ್ತು ಮಧ್ಯಮ ವರ್ಗದ ರೈತರಿಗೆ ಕೃಷಿಯಲ್ಲಿ ಸೋಲು ಭಾವನೆ ಉಂಟಾಗಿರುವುದು; ಆಳುವ ವರ್ಗಗಳು ತಮಗೆ ಬಂದಿರುವ ಬಿಕ್ಕಟ್ಟನ್ನು ತಪ್ಪಿಸಿಕೊಳ್ಳಲು ರೈತಾಪಿ ಮತ್ತು ಇನ್ನಿತರ ಜನಸಾಮಾನ್ಯರ ಮೇಲೆ ಹೆಚ್ಚು ಕರ ಭಾರ ಹೇರುತ್ತಿರುವುದು—ಇವು ಇವತ್ತು ದಿನೇ ದಿನೇ ಚಿಂತಾಜನಕಗೊಳ್ಳುತ್ತಿರುವ ಪರಿಸ್ಥಿತಿಯ ಕೆಲವು ಮುಖ್ಯಾಂಶಗಳು.

ಇವುಗಳ ಹಿನ್ನೆಲೆಯಲ್ಲಿ ಸಮ್ಮೇಳನವು ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ತುಂಬಾ ಯಶಸ್ವಿಯಾಗಿದೆ.

ನಿರ್ಣಯಗಳು :

1. ಕ್ಷಾಮ ಮತ್ತು ನೆರೆ ಪೀಡಿತ ಪ್ರದೇಶಗಳಿಗೆ ತುರ್ತು ಪರಿಹಾರ ಕಾರ್ಯ :—ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳು ನೀಡುವ ವರದಿಗಳ ಪರಿಶೀಲನೆ ಮಾಡುವಲ್ಲಿ ಬಹಳ ಸಮಯ ತೆಗೆದುಕೊಳ್ಳುವುದರಿಂದಲೂ ನಂತರ ಎಷ್ಟು ಸಹಾಯಮಾಡಬಹುದು ಎನ್ನುವುದನ್ನು ಪತ್ತೆ ಹಚ್ಚಲು ಪರಿಸ್ಥಿತಿಯ ಪ್ರತ್ಯಕ್ಷ ಪರಿಶೀಲನೆಗಾಗಿ ತಜ್ಞ ಸಮಿತಿಗಳನ್ನು ಕಳಿಸಿಕೊಡುವುದರಿಂದಲೂ ಅತಿಶಯ ವಿಳಂಬವುಂಟಾಗಿ ತುರ್ತು ಪರಿಹಾರ ಕಾರ್ಯವನ್ನು ಸೂಕ್ತ ಕಾರ್ಯದಲ್ಲಿ ಕೈಗೊಳ್ಳದಿರಲು ಕಾರಣವಾಗುತ್ತದೆ. ಬರಗಾಲ ಮತ್ತು ನೆರೆ ಪೀಡಿತ ಜನರಿಗೆ ತುರ್ತು ಪರಿಹಾರ ನೀಡಲು ಕೂಡಲೇ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು :

ಆಹಾರಧಾನ್ಯ ಸಗಟು ವ್ಯಾಪಾರವನ್ನು ಸಂಪೂರ್ಣವಾಗಿ ರಾಷ್ಟ್ರೀಕರಣಗೊಳಿಸಬೇಕು. ಎರಡು ಸಾವಿರ ಜನಸಂಖ್ಯೆಗೊಂದರಂತೆ ಪಡಿತರ ಪದ್ಧತಿಯ ಅಂಗವಾಗಿ ಯೋಗ್ಯ ದರದ ಅಂಗಡಿಗಳನ್ನು ತೆರೆಯಬೇಕು. ಆಹಾರ ಧಾನ್ಯ, ಸಕ್ಕರೆ, ಎಣ್ಣೆ, ಸೀಮೆ ಎಣ್ಣೆ, ಬಟ್ಟೆ ಮತ್ತಿನ್ನಿತರ ಜೀವನಾವಶ್ಯಕವಾದ ವಸ್ತುಗಳನ್ನು ಕಡಿಮೆ ದರದಲ್ಲಿ ಪಟ್ಟಣ ಮತ್ತು ಹಳ್ಳಿ ಪ್ರದೇಶಗಳಲ್ಲಿ ಸಮಾನ ರೀತಿಯಲ್ಲಿ ಸಾಕಾಗುವಷ್ಟು ಪ್ರಮಾಣದಲ್ಲಿ ವಿತರಣೆ ಮಾಡಬೇಕು. ಬರಗಾಲ ಮತ್ತು ನೆರೆ ಪೀಡಿತ ರಾಜ್ಯಗಳಿಗೆ, ಪ್ರದೇಶಗಳಿಗೆ ಕೂಡಲೇ ಪರಿಹಾರ ಕಾರ್ಯಕ್ರಮ ಕೈಗೊಳ್ಳಲು ಬೇಕಾದಷ್ಟು ಆಹಾರ ಧಾನ್ಯ ಮತ್ತು ಹಣ ಸಹಾಯವನ್ನು ನೀಡಬೇಕು. ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಕನಿಷ್ಟ ಕೂಲಿ ನೀಡಲು ಸಾಧ್ಯವಾಗಬೇಕು. ಎಲ್ಲ ರೀತಿಯ ಕರಗಳನ್ನು, ಸರಕಾರಿ ಬಾಕಿ ಹಣ, ಸೊಸೈಟಿ ಮತ್ತು ಬ್ಯಾಂಕ್ ಸಾಲ ಮರುಪಾವತಿಯನ್ನು ಕೂಡಲೇ ಸ್ಥಗಿತಗೊಳಿಸಬೇಕು. ಭೂ ಕಂದಾಯ ಮತ್ತು ಇತರ ಬಾಕಿ ಹಣವನ್ನು ಪ್ರತಿಶತ ಇಪ್ಪತ್ತೈದಕ್ಕಿಂತಲೂ ಹೆಚ್ಚು ಬೆಳೆ ನಷ್ಟವಾದವರಿಗೆ ಕೂಡಲೇ ರದ್ದುಪಡಿಸುವುದಲ್ಲದೆ ಸಾಕಷ್ಟು ಸವಲತ್ತುಗಳನ್ನು ನಷ್ಟದ ಆಧಾರದಲ್ಲಿ ಬ್ಯಾಂಕ್ ಸೊಸೈಟಿ ಸಾಲಕ್ಕೆ ಸಂಬಂಧಿಸಿ ನೀಡಬೇಕು. ರಸಗೊಬ್ಬರ, ಕ್ರಿಮಿನಾಶಕ, ಡೀಸಲ್, ಬೀಜ ಮುಂತಾದ ಕೃಷಿ ಅವಶ್ಯಕ ವಸ್ತುಗಳನ್ನು ಕಡಿಮೆ ದರದಲ್ಲಿ ಎಲ್ಲೆಲ್ಲಿ ಅವಶ್ಯವೋ ಅಲ್ಲಿ ಬೆಳೆ ಸಾಲ ಅಂಗವಾಗಿ ರೈತರಿಗೆ ನೀಡಬೇಕು ಇದರಿಂದ ರೈತರು ಮುಂದಿನ ಬೆಳೆಯನ್ನಾದರೂ ಬೆಳೆಯಬಹುದು. ಯಾರ ಮನೆಯು ಮುಳುಗಿ ಹಾಳಾಗಿ ಹೋಗಿದೆಯೋ ಅವರಿಗೆ ಕೂಡಲೇ ಪರಿಹಾರ ಮತ್ತು ಸಾಲ ನೀಡಬೇಕು. ಕೂಡಲೇ ವೈದ್ಯಕೀಯ ಚಿಕಿತ್ಸೆಗೆ ನೆರವಾಗಬೇಕು. ಬರಗಾಲ ಪೀಡಿತ ಪ್ರದೇಶಗಳಿಗೆ ನೀರಾವರಿ ಯೋಜನೆಯನ್ನು ನಿಯೋಜಿಸಲು ಮತ್ತು ನೆರೆ ಪೀಡಿತ ಪ್ರದೇಶಗಳಲ್ಲಿ ನೆರೆ ಸಂರಕ್ಷಕ ಒಡ್ಡುಗಳನ್ನು ಕೂಡಲೇ ನಿಶ್ಚಿತ ಅವಧಿಯೊಳಗಾಗಿ ಮಾಡಿ ಪೂರೈಸಬೇಕು. ಎಲ್ಲ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಜನಪ್ರಿಯ ಸಮಿತಿಗಳನ್ನು ರಚಿಸಿ ನಿಷ್ಪಕ್ಷಪಾತವಾಗಿ ಪರಿಹಾರ ಕಾರ್ಯವನ್ನು ಉಸ್ತುವಾರಿ ಮಾಡುವಂತಾಗಬೇಕು. ಅಖಿಲ ಭಾರತ ಕಿಸಾನ್ ಸಭಾವು ಮೇಲೆ ಸೂಚಿಸಿದ ತುರ್ತು ಕ್ರಮಗಳನ್ನು ಸರಕಾರ ಕೈಗೊಳ್ಳಬೇಕೆಂದು ಪ್ರಚಾರ ನಡೆಸುವುದರೊಟ್ಟಿಗೆ ತಾನೇ ಮುಂದಾಗಿ ನಿಂತು ಸರಕಾರ ಮತ್ತು ಎಲ್ಲಾ ಸಾಮೂಹಿಕ ಸಂಘಟನೆಗಳೊಂದಿಗೆ ಸಹಕಾರದಿಂದ ಪರಿಹಾರ ಕಾರ್ಯಕ್ಕಿಳಿಯಬೇಕೆಂದು ತನ್ನೆಲ್ಲಾ ಘಟಕಗಳಿಗೂ ಕರೆ ನೀಡೀತ್ತದೆ.

2. ಅಖಿಲ ಭಾರತ ಕಿಸಾನ್ ಸಭಾ ರೈತರಿಗೆ ತಮ್ಮ ಫಸಲಿಗೆ ಯೋಗ್ಯ ಲಾಭದಾಯಕ ಬೆಲೆ ಪಡೆಯಲು ಐಕ್ಯ ರೀತಿಯಲ್ಲಿ ಹೋರಾಟಕ್ಕಿಳಿಯಲು ಮೊದಲೇ ಕರೆ ಕೊಟ್ಟಿತ್ತು. ಈ ಸಮಸ್ಯೆಯನ್ನು ಎಲ್ಲರಿಗಿಂತಲೂ ಮೊದಲೇ ಎತ್ತಿ ತೋರಿಸಿ ದೇಶದಾದ್ಯಂತ ಪ್ರಚಾರ ಪ್ರಕ್ಷೋಭೆ ನಡೆಸಿ ದೇಶದಾದ್ಯಂತ ಹೋರಾಟ ಬೆಳೆದು ಬಂದು ರೈತರ 'ದೆಹಲಿ ಚಲೋ' ಆಗಿ ಮಾರ್ಪಟ್ಟುದುದು ಮತ್ತು ರೈತರ ಐತಿಹಾಸಿಕ ಹೋರಾಟವಾಗಿ ಬೆಳೆದು ಬಂದುದು ಕಿಸಾನ್ ಸಭಾಕ್ಕೆ ಸಂತೋಷ ಉಂಟಾಗಿದೆ. ಕಿಸಾನ್ ಸಭಾ ತನ್ನೆಲ್ಲಾ ಘಟಕಗಳಲ್ಲಿಯೂ ಭಾರತದ ರೈತಾಪಿ ವರ್ಗ ತನ್ನ ಉಳಿವಿಗಾಗಿ ನಡೆಸಿರುವ ಈ ಹೋರಾಟದಲ್ಲಿ ಹೆಚ್ಚಿನ ನಿಷ್ಠೆಯಿಂದ ನೇತೃತ್ವ ನೀಡಿ ಹೋರಾಟಕ್ಕಿಳಿಯಲು ಕರೆ ಕೊಡುತ್ತದೆ. ಹೆಚ್ಚೆಚ್ಚು ಐಕ್ಯತೆಯನ್ನು ಬೆಳೆಸಿಕೊಳ್ಳಲು ಸೂಚಿಸಿದೆ. ಸರ್ಕಾರ ಭತ್ತದ ಬೆಲೆಯನ್ನು ಪ್ರತಿ ಕ್ವಿಂಟಾಲಿಗೆ 140-00(ಒಂದು ನೂರ ನಲವತ್ತು)ನ್ನು ನಿಗದಿ ಮಾಡಬೇಕು. ಪ್ರತಿ ಟನ್ ಕಬ್ಬಿನ ಬೆಲೆಯನ್ನು ರೂ. 250-00 (ಎರಡು ನೂರಾ ಐವತ್ತು) ಕನಿಷ್ಟ ಬೆಲೆಯಾಗಿ ನಿಗದಿಪಡಿಸಬೇಕು. ವಿವಿಧ ಗ್ರೇಡ್‌ಗಳ ಹತ್ತಿ ಪ್ರಕಾರಗಳಿಗೆ ಪ್ರತಿ ಕ್ವಿಂಟಾಲಿಗೆ ರೂ. 550-00 ರಿಂದ ರೂ. 1,000-00ದ ವರೆಗೆ ನಿಗದಿ ಮಾಡಬೇಕು. ಒಣಕೊಬ್ಬರಿ, ಕೊಬ್ಬರಿ ಎಣ್ಣೆ, ರಬ್ಬರ್ ಮತ್ತು ಕೋಕೋಗಳನ್ನು ಪರದೇಶದಿಂದ ಆಮದು ಮಾಡಿಕೊಳ್ಳುವ ಸರ್ಕಾರದ ನೀತಿ ಸ್ವದೇಶದ ಉತ್ಪನ್ನಗಳಿಗೆ ಕಡಿಮೆ ಬೆಲೆ ಸಿಗುವಂತೆ ಮಾಡಿ ಔದ್ಯಮಿಕ ಬಂಡವಾಳಗಾರರಿಗೆ ಅನುಕೂಲ ಮಾಡುವ ದುರುದ್ದೇಶದಿಂದ ಕೂಡಿದೆ ಎಂದು ಕಿಸಾನ್ ಸಭಾ ಖಂಡಿಸುತ್ತದಲ್ಲದೆ ಕೇರಳ ಮತ್ತು ಕರ್ನಾಟಕ ರಬ್ಬರ್, ಕೋಕೋ ಮತ್ತು ಕೊಬ್ಬರಿ ಬೆಳೆಗಾರರಿಗೆ ಆದ ಅನ್ಯಾಯವನ್ನು ಕೇಂದ್ರ ಸರ್ಕಾರದ ನೀತಿಯನ್ನು ಬಲವಾಗಿ ಖಂಡಿಸುತ್ತದೆ.

3. ಕಿಸಾನ್ ಸಭಾ ಸಮ್ಮೇಳನವು ಜನಸಾಮಾನ್ಯರ ಮೇಲೆ ಮಿತಿಮೀರಿದ ಹೊರೆ ಹಾಕಲು ವಸ್ತುಗಳ ಮತ್ತು ಸೇವೆಗಳ ಮೇಲೆ ಅತಿಯಾದ ಕರವನ್ನು ಹಾಕುವ ಕಾಂಗ್ರೆಸ್ ಸರ್ಕಾರದ ನೀತಿಯನ್ನು ತೀವ್ರವಾಗಿ ಖಂಡಿಸುತ್ತದೆ. ದಿನೋಪಯೋಗಿ ವಸ್ತುಗಳ ಮೇಲಿನ ಕರವನ್ನು ತೀರ ಕಡಿಮೆ ಮಟ್ಟಕ್ಕಿಳಿಸಬೇಕು. ಹಣ ಸಂಗ್ರಹ ಮಾಡುವ ನೆಪದಲ್ಲಿ ಕುರುಡಾಗಿ ಕರವನ್ನು ಏರಿಸುತ್ತಾ ಹೋಗುವುದನ್ನು ಸರ್ಕಾರ ಕೂಡಲೇ ಕೈಬಿಡಬೇಕು. ಇನ್ನು ಮುಂದೆ ವಿದ್ಯುಚ್ಛಕ್ತಿಯ ದರ ಮತ್ತು ಬಸ್ ದರಗಳಲ್ಲಿ ಹೆಚ್ಚು ಮಾಡಕೂಡದು. ಪ್ರತಿ ಯೂನಿಟ್ ವಿದ್ಯುಚ್ಛಕ್ತಿ ದರವನ್ನು ಹತ್ತು ಪೈಸೆಗೆ ಇಳಿಸಬೇಕು. ಪ್ರತಿ ಅಶ್ವಶಕ್ತಿ ಪಂಪಿಗೆ ಪ್ರತಿ ವರ್ಷಕ್ಕೆ ರೂ. ಹತ್ತಕ್ಕೆ ಇಳಿಸಬೇಕು. ಸಾರ್ವಜನಿಕ ಸರ್ಕಾರಿ ಉದ್ದಿಮೆಗಳಲ್ಲಿ ಭ್ರಷ್ಟಾಚಾರ ಹೋಗಲಾಡಿಸಬೇಕು. ಪ್ರತಿ ವರ್ಷಕ್ಕೆ 20,000-00 (ಇಪ್ಪತ್ತು ಸಾವಿರ) ಉತ್ಪನ್ನ ಹೊಂದಿದ ಉದ್ಯೋಗಪತಿಗಳ ಉತ್ಪನ್ನಕರ, ಮಾರಾಟಕರ ಮತ್ತು ವಿದ್ಯುಚ್ಛಕ್ತಿ ಕರ ಬಾಕಿ ಹಣವನ್ನು ಕೂಡಲೇ ಯಾವ ಮೀನ ಮೇಷ ಮಾಡದೆ ವಸೂಲಿ ಮಾಡಬೇಕು. ಕರ ಬಾಕಿಕೊಡದಿದ್ದವರ ಮೇಲೆ ಉಗ್ರ ಶಿಸ್ತಿನ ಕ್ರಮವನ್ನು ಕೈಗೊಳ್ಳಬೇಕು.

4. ಈ ವರೆಗೂ ಮೊದಲು ಹೇಗಿತ್ತೋ ಹಾಗೇ ಭೂಮಾಲೀಕರಲ್ಲಿ ಭೂಸ್ವಾಮ್ಯ ಕೇಂದ್ರೀಕೃತವಾಗಿರುವುದರ ಬಗ್ಗೆ ಕಿಸಾನ ಸಭಾ ತೀವ್ರ ಕಳಕಳ ಹೊಂದಿದೆ. ಭೂ ಮಾಲಿಕ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಗೊಳಿಸದೆ ಉಳುವವನೇ ಭೂಮಿಯ ಒಡೆಯನೆಂದು ಪರಿಗಣಿಸದೆ ಹೋದರೆ ಗ್ರಾಮೀಣ ಜನರ ಜೀವನದಲ್ಲಿ ಮೂಲಭೂತ ಬದಲಾವಣೆಯೇ ಆಗಲಿ ಅಥವಾ ನಿಶ್ಚಿತ ಕೃಷಿ ಅಭಿವೃದ್ಧಿಯನ್ನಾಗಲೀ ಸಾಧಿಸಲು ಅಸಾಧ್ಯವೆಂದು ಕಿಸಾನ್ ಸಭಾ ಸಾರಿ ಸಾರಿ ಹೇಳುತ್ತದೆ. ಕಾಂಗ್ರೆಸ್ ಮತ್ತು ಇನ್ನಿತರ ಸರ್ಕಾರಗಳು ಕೈಗೊಂಡ ಭೂ ಹಿಡುವಳಿ ಕಾನೂನಿನಲ್ಲಿರುವ ಲೋಪ ದೋಷಗಳನ್ನು ತಿದ್ದುಪಡಿ ಮಾಡಿ ತೀವ್ರ ರೀತಿಯಲ್ಲಿ ಕಾರ್ಯರೂಪಕ್ಕಿಳಿಸುವಂತೆ ಪ್ರಭಾವಿ ಕ್ರಮಗಳನ್ನು ಅನುಸರಿಸಬೇಕು. ಗೇಣಿದಾರರಿಗೆ ಭೂ ಸಾಗುವಳಿ ಹಕ್ಕುಗಳನ್ನು ನೋಂದಾಯಿಸುವ ತುರ್ತು ಕ್ರಮಗಳನ್ನು ಅನುಸರಿಸಬೇಕು. ರೈತ ಮತ್ತು ಇನ್ನಿತರ ಪ್ರಜಾಸತ್ತಾತ್ಮಕ ಸಂಘಟನೆಗಳೆಲ್ಲಾ ಸೇರಿ ಐಕ್ಯದಿಂದ ಭೂ ಹಿಡುವಳಿದಾರರಿಗೆ ಕಾನೂನುಗಳ ಲಾಭ ಬಡ ಭೂಹೀನ ರೈತರಿಗೆ ತಟ್ಟುವಂತೆ ಪ್ರಯತ್ನಿಸಬೇಕು. ಪಶ್ಚಿಮ ಬಂಗಾಳ ಮತ್ತು ಮೊದಲಿದ್ದ ಕೇರಳ ಎಡರಂಗ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ತಿದ್ದುಪಡಿ ಮಾಡಿ ಕಳಿಸಿರುವ ಭೂ ಸುಧಾರನೆ ಕಾನೂನುಗಳಿಗೆ ಅಧ್ಯಕ್ಷರ ಒಪ್ಪಿಗೆ ನೀಡಲು ಸಮ್ಮೇಳನ ಒತ್ತಾಯಿಸುತ್ತದೆ.

5. ಬಡ ರೈತರು ಹಾಗೂ ಕೃಷಿ ಕೂಲಿಕಾರರು ಎದುರಿಸುತ್ತಿರುವ ಸಾಲದ ಹೊರೆಯನ್ನು ತೀವ್ರವಾಗಿ ಪರಿಗಣಿಸಿ ಇನ್ನಿತರ ಸಂಘಟನೆಗಳೊಂದಿಗೆ ಸೇರಿ ಐಕ್ಯ ರೀತಿಯಲ್ಲಿ ತುರ್ತು ಹೋರಾಟಕ್ಕೆ ಇಳಿಯಲು ಕಿಸಾನ್ ಸಭಾ ತನ್ನೆಲ್ಲಾ ಘಟಕಗಳಿಗೂ ಕರೆ ಕೊಡುತ್ತದೆ. ಎರಡೂವರೆ ಎಕರೆ ಮತ್ತು ಕಡಿಮೆ ಭೂಮಿ ಪಡೆದ ಬಡ ರೈತ ಮತ್ತು ಕೃಷಿ ಕೂಲಿದಾರರ ಸಾಲ ರದ್ಧತಿ ಮಾಡಬೇಕು. ಪ್ರತಿಶತ ಆರು ರೂಪಾಯಿಯ ಸರಳ ಬಡ್ಡಿ ದರದಲ್ಲಿ ಸರಕಾರ ಸಾಲ ಸಿಗುವ ವ್ಯವಸ್ಥೆ ಆಗಬೇಕು. ಜಾಮಿನು ಇಲ್ಲದ ಬಡರೈತರಿಗೆ ಮತ್ತು ಕೃಷಿ ಕೂಲಿಗಾರರಿಗೆ ಸಾಲ ಸಿಗುವ ವಿಶೇಷ ವ್ಯವಸ್ಥೆ ಜಾರಿಗೆ ಬರಬೇಕು.

6. ಮೂವತ್ತೈದು ವರ್ಷಗಳ ಸ್ವಾತಂತ್ರ್ಯಾನಂತರವೂ ಕೃಷಿ ಕೂಲಿಗಾರರು ಅರೆಗುಲಾಮಿ ಪದ್ಧತಿಯಲ್ಲಿ ಬದುಕುವಂತಾಗಿದೆಯಲ್ಲದೆ ಕಡಿಮೆ ಕೂಲಿ ಇರಲು, ಮನೆ ಇಲ್ಲದೆ ಜೀತ ಪದ್ಧತಿಯ ಮೂಲಕ ಭೂ ಮಾಲೀಕ ಮತ್ತು ಬಡ್ಡಿ ಸಾಲಗಾರರ ಕೈಯಲ್ಲಿ ನರಳುವಂತಾಗಿದೆ. ಜೀವನಾವಶ್ಯಕ ಕನಿಷ್ಠ ಕೂಲಿ ಉತ್ಪನ್ನ ಪರಿಸ್ಥಿತಿ ಮತ್ತು ಕೆಲಸದ ಗ್ಯಾರಂಟಿ ಇವುಗಳನ್ನು ಕೃಷಿ ಕೂಲಿಗಾರರಿಗೆ ನಿಶ್ಚಿತಗೊಳಿಸುವ ಕೇಂದ್ರ ಕಾನೂನು ಬರಬೇಕು. ಕೃಷಿ ಕೂಲಿಗಾರರಿಗೆ ಕನಿಷ್ಟ ದಿನಗೂಲಿ ದಿನಕ್ಕೆ ರೂ. 12-00 (ಹನ್ನೆರಡು) ನಿಗದಿಯಾಗಬೇಕು. ಹೆಚ್ಚುವರಿ ಮತ್ತು ಬಂಜರು ಭೂಮಿ ಈ ಕೂಡಲೇ ಒಂದು ನಿಶ್ಚಿತ ಅವಧಿಯೊಳಗಾಗಿ ಭೂ ಹೀನ ಮತ್ತು ಬಡ ರೈತರಿಗೆ ಹಂಚಿಕೆಯಾಗಬೇಕು. ಮನೆ ಇಲ್ಲದ ಭೂಹೀನ ಮತ್ತು ಬಡ ರೈತರಿಗೆ ವಾಸಿಸಲು ಮನೆ ಕಟ್ಟಲು ಸ್ಥಳ ಮತ್ತು ಸಹಾಯ ನೀಡಬೇಕು. ಗಿರಿಜನರಿಂದ ಬಡಿಸಿಕೊಂಡ ಭೂಮಿಯನ್ನು ಅವರಿಗೆ ಮತ್ತೆ ಕೊಡಬೇಕು. ಹರಿಜನರ ಮೇಲಿನ ಎಲ್ಲಾ

ಅಖಿಲ ಭಾರತ ಸಮ್ಮೇಳನದ ನಿರ್ಣಯಗಳು

ದಾಳಿ, ದಬ್ಬಾಳಿಕೆಯನ್ನು ನಿಲ್ಲಿಸಬೇಕು. ಕೃಷಿ ಕೂಲಿಗಾರರಿಗೆ ವರ್ಷವಿಡೀ ಹೆಚ್ಚಿನ ಕೂಲಿಕೆಲಸ ಸಿಗುವ ಯೋಜನೆ ಹಾಕಬೇಕು. ಎನ್. ಆರ್. ಇ. ಪಿ. ಗೆ ಹೆಚ್ಚಿನ ಧನಸಹಾಯ ನೀಡಬೇಕು. ಅರವತ್ತು ವಯಸ್ಸು ಮಿಕ್ಕಿದ ಕೃಷಿ ಕೂಲಿಗಾರರಿಗೆ ತಿಂಗಳಿಗೆ ರೂ. 50-00 (ಐವತ್ತು) ವೃದ್ಧಾಪ್ಯ ವೇತನ ನೀಡಬೇಕು. ಈ ಸಮ್ಮೇಳನವು ಅಖಿಲ ಭಾರತ ಕೃಷಿ ಕೂಲಿಗಾರರ ಸಂಘ ಮತ್ತು ಕಿಸಾನ್ ಸಭಾ ಎರಡೂ ಜೊತೆಗೂಡಿ ಐಕ್ಯ ಹೋರಾಟ ಸಂಘಟಿಸಲು ಕರೆ ಕೊಡುತ್ತದೆ.

7. ಹರಿಜನ ಹಾಗೂ ಕೃಷಿಕೂಲಿಗಾರರ ಮೇಲೆ ಮುಖ್ಯವಾಗಿ ಕಾಂಗ್ರೆಸ್ ಆಡಳಿತ ರಾಜ್ಯದಲ್ಲಿ ದಿನೇ ದಿನೇ ಬೆಳೆದು ಬರುತ್ತಿರುವ ಹಿಂಸಾಚಾರ, ದಾಳಿ ದಬ್ಬಾಳಿಕೆ ಅತ್ಯಾಚಾರದ ಬಗ್ಗೆ ಕಿಸಾನ್ ಸಭಾ ತೀವ್ರ ಅಸಂತೃಪ್ತಿ ವ್ಯಕ್ತಪಡಿಸುತ್ತದೆ. ಈ ಬಗ್ಗೆ ಕೇಂದ್ರ ಸರಕಾರಗಳು ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮತ್ತು ಇಂತಹ ನೀಚ ಕೃತ್ಯಗಳನ್ನು ತಕ್ಷಣವೇ ತಡೆಹಿಡಿಯಬೇಕೆಂದು ಸಮ್ಮೇಳನವು ಒತ್ತಾಯಿಸುತ್ತದೆ. ಈ ಹೀನ ಅನಾಗರೀಕ ಕೃತ್ಯಗಳ ವಿರುದ್ಧ ಮುಂದಿನ ಜನವಿಭಾಗಗಳು ಮಾತ್ರ ಸಂಘಟಿತಗೊಂಡು ಪ್ರತಿಭಟಿಸಿದರೆ ಸಾಲದು ಬದಲು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಐಕ್ಯದಿಂದ ಜೊತೆಗೂಡಿ ಹೋರಾಡಿದರೇ ಮಾತ್ರ ಈ ದುಷ್ಟ ಕೃತ್ಯಗಳನ್ನು ತಡೆಯಬಹುದಾಗಿದೆ.

8. ಬಂಡವಾಳಶಾಹಿಯ ವಿರುದ್ಧ ಭಾರತದ ಕಾರ್ಮಿಕ ವರ್ಗವು ಐಕ್ಯ ರೀತಿಯಲ್ಲಿ ವಿರೋಜಿತ ಹೋರಾಟ ಹೂಡಿರುವುದಕ್ಕೆ ಅಖಿಲ ಭಾರತ ಕಿಸಾನ್ ಸಭಾ ಅಭಿನಂದನೆ ಹೇಳುತ್ತದೆ. ಒಂದು ಕೋಟಿ ಇಪ್ಪತ್ತು ಲಕ್ಷ ಕಾರ್ಮಿಕರನ್ನೊಳಗೊಂಡಿದ್ದ ಜನವರಿ ಹತ್ತೊಂಬತ್ತರಂದು ಒಂದು ದಿನದ ಯಶಸ್ವಿ ಮುಷ್ಕರವು ಭಾರತದ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಐತಿಹಾಸಿಕ ಮೈಲುಗಲ್ಲಾಗಿದೆ. ಕೃಷಿ ಕಾರ್ಮಿಕರು ಇದರಲ್ಲಿ ಭಾಗವಹಿಸಿರುವುದು ಅತ್ಯಂತ ಗಮನಾರ್ಹ. ಹೋರಾಡುತ್ತಿರುವ ಕಾರ್ಮಿಕ ವರ್ಗಕ್ಕೆ ಅಖಿಲ ಭಾರತ ಕಿಸಾನ್ ಸಭಾ ಸಂಪೂರ್ಣ ಭಾತೃತ್ವವನ್ನು ವ್ಯಕ್ತಪಡಿಸಲು ಇಚ್ಛಿಸುತ್ತದೆಯಲ್ಲವೆ ಸಮ್ಮೇಳನವು ಇನ್ನು ಮುಂದೆ ಕಾರ್ಮಿಕ ರೈತ ವರ್ಗದ ಸಖ್ಯತೆಯನ್ನು ಇನ್ನೂ ಹೆಚ್ಚು ಇಮ್ಮಡಿ ಮುಮ್ಮಡಿಸಿಕೊಂಡು ಹೋಗಲು ಕಿಸಾನ್ ಸಭಾ ತನ್ನೆಲ್ಲಾ ಘಟಕಗಳಿಗೂ ಕೇಳಿಕೊಂಡಿದೆ.

9. ಪಶ್ಚಿಮ ಬಂಗಾಲ ಮತ್ತು ತ್ರಿಪುರ ರಾಜ್ಯಗಳ ಎಡರಂಗ ಸರ್ಕಾರಗಳು ರೈತರ, ಗೇಣಿದಾರರ ಮತ್ತು ಕೃಷಿ ಕೂಲಿಗಾರರ ಪರ ಕೈಗೊಂಡು ಅನೇಕ ಪ್ರಗತಿಪರ ಸೂಕ್ತ ಕ್ರಮಗಳ ಬಗ್ಗೆ ಅಖಿಲ ಭಾರತ ಕಿಸಾನ್ ಸಭಾವು ತುಂಬು ಹೃದಯದಿಂದ ಮೆಚ್ಚಿಕೆ ವ್ಯಕ್ತಪಡಿಸುತ್ತದೆ.

ಪ. ಬಂಗಾಲದ ಎಡರಂಗ ಸರಕಾರ ಕೃಷಿ ಕೂಲಿಕಾರರಿಗೆ ಕನಿಷ್ಟ ದಿನಕೂಲಿ ರೂ. 9-58 ನಿಗದಿ ಪಡಿಸಿದ್ದೇ ಅಲ್ಲದೇ ಯಶಸ್ವೀ ರೀತಿಯಲ್ಲಿ ಕಾರ್ಯರೂಪಕ್ಕಿಳಿಸಿದೆ. ಕೃಷಿ ಕೂಲಿಗಾರರಿಗೆ, ಬಡ ರೈತರಿಗೆ ಸುಗ್ಗಿ ಇಲ್ಲದ ಕಾಲದಲ್ಲಿ ಉದ್ಯೋಗ ನೀಡಲು ಸರಕಾರ ಕೂಲಿಗಾಗಿ ಕಾಳು ಯೋಜನೆಯಿಂದ ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದೆ. ಸಾಲ ಭಾರದಿಂದ ಪರಿಹಾರ ನೀಡಿದೆ. ಲಕ್ಷಾಂತರ ಜನರಿಗೆ ಮನೆ ಕಟ್ಟಲು ಉಚಿತ ಸ್ಥಳ ನೀಡಿ ಪಟ್ಟಾಮಾಡಿ ಕೊಟ್ಟಿದೆ. ಬೆಳೆ ಹಂಚಿಕೆದಾರರಿಗೆ ಒಕ್ಕಲು ಬಿಡಿಸುವ, ಹಕ್ಕುಗಳ ಸೌರಂಕ್ಷಣೆ ಇಲ್ಲದಿರುವ ಮತ್ತು ಸಾಲ ಹೊರೆಯಿಂದ ತಪ್ಪಿಸಲು ಸಹಾಯ ಇಲ್ಲದಿರುವ ಹಿನ್ನೆಲೆಯಲ್ಲಿ ಅವರಿಗೆ ಈ ಎಲ್ಲ ಸಮಸ್ಯೆಗಳನ್ನು "ಆಪರೇಷನ್ ಬರ್ಗ" ಮೂಲ ಯಶಸ್ವಿ ರೀತಿಯಲ್ಲಿ ಬಗೆಹರಿಸಿದೆ. ಬೇನಾಮಿ ಒಕ್ಕಲು ಬಿಡಿಸುವ ಹೀನಕ್ರಮಗಳನ್ನು ತಡೆಗಟ್ಟಲು ಭೂಸುಧಾರಣೆ ಕಾನೂನಿಗೆ ಸೂಕ್ತ ತಿದ್ದುಪಡಿ ತಂದಿದೆ. ಬೆಳೆ ಹಂಚಿಕೆದಾರರ ಹೆಸರುಗಳನ್ನು ನೋಂದಾಯಿಸಿದೆ. ಬಡ ಮತ್ತು ಮಧ್ಯಮ ವರ್ಗದ ರೈತರಿಗೆ ಸಾಲ ಮತ್ತು ಕರಗಳಲ್ಲಿ, ಭೂಕಂದಾಯದಲ್ಲಿ ಅನೇಕ ಸವಲತ್ತುಗಳನ್ನು ನೀಡಲಾಗಿದೆ. ಇದೆಲ್ಲದಕ್ಕೂ ಹೆಚ್ಚಾಗಿ ಮೂರು ಲಕ್ಷಕ್ಕೂ ಹೆಚ್ಚು ಎಕರೆ ಜಮೀನನ್ನ ಭೂಹೀನ ಬಡ ರೈತರಿಗೆ ಹಂಚಿಕೆ ಮಾಡಿದೆ. ಈ ಮೊದಲು 6 ಲಕ್ಷ ಎಕರೆ ಭೂಮಿಯನ್ನು ಭೂಹೀನರಿಗೆ ಹಂಚಿಕೆ ಮಾಡಿತ್ತು. ಹೀಗೆ ಒಟ್ಟು ಒಂಬತ್ತು ಲಕ್ಷಕ್ಕೂ ಹೆಚ್ಚು ಎಕರೆ ಭೂಮಿಯನ್ನು—ಭಾರತದಲ್ಲಿ ಮರು ಹಂಚಿಕೆಯಾದ ಒಟ್ಟು ಭೂಮಿಯ ಅರ್ಧಭಾಗವನ್ನು—ಪ. ಬಂಗಾಲ ರಾಜ್ಯದಲ್ಲಿ ಮರುಹಂಚಿಕೆ ಮಾಡಲಾಗಿದೆ. ಭೂಹಿಡುವಳಿ ಕಾನೂನಿನಲ್ಲಿರುವ ಲೋಪದೋಷಗಳನ್ನು ಪತ್ತೆಹಚ್ಚಿ ಹೆಚ್ಚುವರಿ ಭೂಮಿಯನ್ನು ಪಡೆಯಲು ಸೂಕ್ತ ತಿದ್ದುಪಡಿ ತಂದು ಅಸೆಂಬ್ಲಿಯಲ್ಲಿ ಪಾಸುಮಾಡಿ ಕೇಂದ್ರ ಸರಕಾರಕ್ಕೆ ಕಳಿಸಿದಾಗ್ಯೂ ಇನ್ನೂವರೆಗೂ ಅಧ್ಯಕ್ಷರ ಒಪ್ಪಿಗೆ ಸಹಿ ಬಿದ್ದಿಲ್ಲ. ಈ ತಿದ್ದುಪಡಿಗಳು ಉಳಿದೆಲ್ಲ ರಾಜ್ಯಗಳಿಗೂ ಮಾದರಿಯಾಗಿವೆ. ತ್ರಿಪುರ ಸರಕಾರವು ಸಹ ಇದೇ ರೀತಿಯಲ್ಲಿ ಕ್ರಮಗಳನ್ನು ಕೈಗೊಂಡಿದೆ. ಸರಕಾರ ಕೈಗೊಂಡ ಸವಲತ್ತುಗಳು/ಕ್ರಮಗಳು ಬರಲಿಕ್ಕೆ ಮತ್ತು ಜಾರಿಯಾಗಲಿಕ್ಕೆ ಈ ರಾಜ್ಯಗಳ ರೈತರ ಶಾಂತಿಯುತ ಚಳವಳಿಯಿಂದಾಗಿ ಸಾಧ್ಯವಾಗುವಂತಾಗಿದೆಯಲ್ಲದೇ ಈ ಮೂಲಕ ಅಖಿಲ ಭಾರತ ಕಿಸಾನ್ ಸಭಾ ಸಹ ಹೆಚ್ಚು ಬಲಿಷ್ಟವಾಗಿ ಬೆಳೆಯಲು ಸಹಾಯಕವಾಗುವಂತಾಗಿದೆ.

ಪ. ಬಂಗಾಲ ಮತ್ತು ತ್ರಿಪುರ ಎಡರಂಗ ಸರಕಾರಗಳು ಕೈಗೊಂಡ ಕ್ರಮಗಳ ಮಾದರಿಯಲ್ಲಿ ಉಳಿದೆಲ್ಲ ರಾಜ್ಯಗಳಲ್ಲೂ ಈ ಬಗ್ಗೆ ಒತ್ತಾಯಿಸಿ ಪ್ರಚಾರ, ಪ್ರಕ್ಷೋಭೆ ನಡೆಸಬೇಕೆಂದು ಈ ಸಮ್ಮೇಳನದಲ್ಲಿ ಕಿಸಾನ್ ಸಭಾವು ತನ್ನೆಲ್ಲ ಘಟಕಗಳಿಗೆ ಕರೆ ನೀಡುತ್ತದೆ.

10. ಭಾರತದ ರೈತಾಪಿ ಜನರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪರಂಪರೆಯನ್ನು ನೆನಪು ಮಾಡಿಕೊಡುತ್ತಾ, ಸಮ್ಮೇಳನದಲ್ಲಿ ರೈತಾಪಿ ವರ್ಗವು ಕಾರ್ಮಿಕ ವರ್ಗ ಮತ್ತು ಉಳಿದ ಪ್ರಗತಿಪರ ಶಕ್ತಿಗಳೊಂದಿಗೆ ಐಕ್ಯದಿಂದ ಜೊತೆಗೂಡಿ ಸಾಮ್ರಾಜ್ಯಶಾಹಿಯ ಭೀಕರ ಅಣುಅಸ್ತ್ರ ಯುದ್ಧ ನೀತಿಯನ್ನು ಪ್ರತಿಭಟಿಸಿ ಬಯಲಿಗೆಳೆಯಲು ಕಿಸಾನ್ ಸಭಾ ಕರೆ ನೀಡುತ್ತದೆ.

11. ದೇಶದಲ್ಲಿ ಮತೀಯ ಗಲಭೆಗಳು ಹೆಚ್ಚಾಗುತ್ತಿರುವ ಬಗ್ಗೆ ಕಿಸಾನ್ ಸಭಾ ತೀವ್ರ ಕಳವಳ ವ್ಯಕ್ತಪಡಿಸುತ್ತದೆಯಲ್ಲದೆ ದೇಶದ ಐಕ್ಯತೆಯನ್ನು ವಿಚ್ಛಿದ್ರಗೊಳಿಸುವ ಈ ಕುತಂತ್ರಗಳನ್ನು ಬಯಲಿಗೆಳೆದು ವಿಫಲಗೊಳಿಸದೇ ಹೋದಲ್ಲಿ ರೈತರ, ದುಡಿಯುವ ಜನತೆಯ ಹಿತಕ್ಕಾಗಿ ಹೋರಾಡುವುದು ಅಸಾಧ್ಯವೆಂದು ತಿಳಿದ ಕಿಸಾನ್ ಸಭಾ ತನ್ನೆಲ್ಲಾ ಘಟಕಗಳಿಗೂ ಉಳಿದೆಲ್ಲಾ ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಸಂಘಟನೆಗಳೊಂದಿಗೆ ಐಕ್ಯದಿಂದ ಈ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಡಿ ದೇಶದಲ್ಲಿ ಮತೀಯ ಸೌಹಾರ್ದಕ್ಕೆ ಅಲ್ಪ ಸಂಖ್ಯಾತರ ರಕ್ಷಣೆ ಸಾಧ್ಯವಾಗುವಂತೆ ಶ್ರಮಿಸಲು ಕರೆ ನೀಡಿದೆ.

ಈ ಮುಖ್ಯ ತೀರ್ಮಾನಗಳಲ್ಲದೆ ಸಮ್ಮೇಳನವು ಒಟ್ಟು 29 ತೀರ್ಮಾನಗಳನ್ನು ಒಪ್ಪಿಕೊಂಡಿದೆ.

ವಾರಣಾಸಿ ಸಮ್ಮೇಳನದ ನಿರ್ಣಯಗಳನ್ನು ಯಶಸ್ವೀ ರೀತಿಯಲ್ಲಿ ಜಾರಿಗೊಳಿಸುವಲ್ಲಿ, ದೇಶದಲ್ಲಿ ರೈತಾಪಿವರ್ಗದ ಹೋರಾಟ ಕಟ್ಟುವಲ್ಲಿ ನಿರ್ಣಾಯಕ ಪಾತ್ರವಹಿಸಿರುವುದೇ ಅಲ್ಲದೆ ಈ ಸಮ್ಮೇಳನವು ಈ ಕಾಲ ಘಟ್ಟದ ರೈತಾಪಿ ವಿಭಾಗದ ಪರಿಸ್ಥಿತಿಯನ್ನು ಗುರ್ತಿಸಿ ತುರ್ತು ಕರ್ತವ್ಯಗಳನ್ನು ನಿರ್ದಿಷ್ಟಗೊಳಿಸಿಕೊಂಡು ಇವುಗಳನ್ನಾಧಾರಿತ ನಿರ್ಣಯಗಳನ್ನು ಕೈಗೊಂಡು ಇನ್ನು ಮುಂದೆ ರೈತ ಹೋರಾಟಕ್ಕೆ ಸರಿಯಾದ ಮಾರ್ಗದರ್ಶನ ನೀಡುವಲ್ಲಿಈ ಸಮ್ಮೇಳನಮಹತ್ವಪೂರ್ಣ ಮತ್ತು ಯಶಸ್ವಿ ಸಮ್ಮೇಳನವಾಗಿದೆ.

ಅರವತ್ತೇಳು ಲಕ್ಷಕ್ಕೂ ಹೆಚ್ಚು ಸದಸ್ಯತ್ವ ಪಡೆದ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನಕ್ಕೆ ದೇಶದ ಹದಿನೆಂಟು ರಾಜ್ಯಗಳಿಂದಲೂ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

○

ಮಂಗಳೂರು :

ಕುಂದುಕೊರತೆಗಳತ್ತ ಗಮನ ಸೆಳೆಯಲು ಕಾರ್ಮಿಕರ ಸಾಮೂಹಿಕ ಸತ್ಯಾಗ್ರಹ

ಸಿ.ಐ.ಟಿ.ಯು. ಮತ್ತು ಎ.ಐ.ಟಿ.ಯು.ಸಿ.ಗಳ ಜಂಟೀ ನೇತೃತ್ವದಲ್ಲಿ ಕಾರ್ಮಿಕರ ಕುಂದುಕೊರತೆಗಳತ್ತ ಗಮನ ಸೆಳೆಯಲು ಅಸಿಸ್ಟೆಂಟ್ ಲೇಬರ್ ಕಮೀಶನರ್, ಪ್ರಾವಿಡೆಂಟ್ ಫಂಡ್ ಆಫೀಸರ್ ಮತ್ತು ಇ. ಎಸ್. ಐ. ಕಚೇರಿಗಳ ಎದುರು ನವೆಂಬರ್ 9 ರಂದು ಕಾರ್ಮಿಕರ ಸಾಮೂಹಿಕ ಸತ್ಯಾಗ್ರಹ ಯಶಸ್ವಿಯಾಗ ನಡೆಯಿತು.

ಜಿಲ್ಲೆಯ ಕಾರ್ಮಿಕ ಇಲಾಖೆಯು ಕಾರ್ಮಿಕ ವಿವಾದಗಳ ಕುರಿತು ಅಸಡ್ಡೆ ನೀತಿಯನ್ನು ಅನುಸರಿಸುತ್ತಾ ಇದೆ. ಇಬ್ಬರು ಲೇಬರ್ ಆಫೀಸರ್ ಮತ್ತು ಒಬ್ಬರು ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರು ಇದ್ದರೂ ತಿಂಗಳುಗಟ್ಟಲೆ ವಿವಾದ ಇತ್ಯರ್ಥವಾಗುತ್ತಿಲ್ಲಿ. ಎಷ್ಟೋ ವಿವಾದಗಳು ಇನ್ನೂ ಇತ್ಯರ್ಥವಾಗದೆ ಬಾಕಿ ಇವೆ. ಕಾನೂನಿನ ಸವಲತ್ತನ್ನು ಜಾರಿ ಮಾಡುವ ಬದಲು, ವಂಚಿಸುವ ಮಾಲೀಕರುಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಸರಕಾರದ ಕಾರ್ಮಿಕ ವಿರೋಧಿ ನೀತಿಯು ಜಿಲ್ಲೆಯ ಕಾರ್ಮಿಕರ ಇಲಾಖೆಯಲ್ಲಿ ಪ್ರತಿಬಿಂಬಿಸುತ್ತಿದೆ.

ಪ್ರಾವಿಡೆಂಟ್ ಫಂಡ್ ಮತ್ತು ಇ. ಎಸ್. ಐ. ಕಾರ್ಮಿಕರ ಭದ್ರತಾ ಕಾಯಿದೆಗಳಾಗಿವೆ. ಆದರೆ ಅವುಗಳ ಪ್ರಯೋಜನ ದೊರೆಯುತ್ತಿಲ್ಲ. ಮಜೂರರಿಂದ ವಸೂಲುಮಾಡಿದ ಹಣವನ್ನು ಎಷ್ಟೋ ಮಾಲೀಕರು ವಸೂಲಮಾಡಿದ ಹಣವನ್ನು ಸರಿಯಾಗಿ ಪಾವತಿ ಮಾಡುತ್ತಿಲ್ಲ. ಲಕ್ಷಾಂತರ ರೂಪಾಯಿ ಬಾಕಿ ಇದೆ. ಕೆಲಸಕ್ಕೆ ರಾಜೀನಾಮೆ ಕೊಟ್ಟ ಅಥವಾ ನಿವೃತ್ತರಾದ ಅಥವಾ ಮೃತಪಟ್ಟ ಕಾರ್ಮಿಕನ ಹಣವು ವರ್ಷ ಕಳೆದರೂ ಪಾವತಿಯಾಗುವದಿಲ್ಲ. ಒಂದಲ್ಲ ಒಂದು ನೆಪದಿಂದ ಕಾರ್ಮಿಕರನ್ನು ಸತಾಯಿಸಲಾಗುತ್ತಿದೆ.

ಇ.ಎಸ್.ಐ ನಲ್ಲಿ ಬೇಕಾದ ಔಷದಿ ದೊರೆಯುತ್ತಿಲ್ಲ. ಬಾಕಿ ಇದ್ದ ಹಣವನ್ನು ವಸೂಲಮಾಡಲು ವಿಫಲವಾದ ಈ ಇಲಾಖೆಯಿಂದ ಕಾರ್ಮಿಕರ ಹಿತರಕ್ಷಣೆ ಆಗಲು ಸಾಧ್ಯವಿಲ್ಲ. ಭ್ರಷ್ಟಾಚಾರ ತಾಂಡವಾಡುತ್ತಿದೆ. ಇಲಾಖೆಗೆ ದೂರು ಕೊಟ್ಟರೂ ತನಿಕೆ ನಡೆಯುತ್ತಿಲ್ಲ.

ಮೇಲ್ಕಂಡ ಇಲಾಖೆಗಳ ಅಸಡ್ಡೆತನವನ್ನು ಖಂಡಿಸಿ ಮತ್ತು ಸರಕಾರ ಹೊರಡಿಸಿದ ಕನಿಷ್ಟ ವೇತನ ಪ್ರಕಟಣೆಯನ್ನು ಹೈಕೋರ್ಟು ತಳ್ಳಿಹಾಕಲು ಪ್ರತ್ಯೆಕ್ಷ ಕಾರಣರಾದ ಕಾರ್ಮಿಕ ಮಂತ್ರಿ ಜಕನೂರ್ ಅವರ ರಾಜೀನಾಮೆಗೆ ಒತ್ತಾಯಿಸಿ, ನವ್ಹೆಂಬರ್ 9 ರಂದು ಸಾಮೂಹಿಕ ಸತ್ಯಾಗ್ರಹ ನಡೆಯಿತು.

(7.ನೇ ಪುಟ ನೋಡಿ)

ರಾಯಚೂರು :

ಸಿನೇಮಾ ಕಾರ್ಮಿಕರ ಹೋರಾಟ

ರಾಯಚೂರು ನಗರದಲ್ಲಿ ಐದು ಚಿತ್ರಮಂದಿರಗಳಿವೆ. ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದೊರೆಯುವ ಸಂಬಳ ರೂ. 50 ರಿಂದ ರೂ. 150ರ ವರೆಗೆ ಮಾತ್ರ. ದಿನಕ್ಕೆ 12 ಘಂಟೆಗಳ ಕೆಲಸ. ಉಳಿದ ಯಾವುದೇ ಸೌಲಭ್ಯಗಳೂ ಕನಸಿನ ಗಂಟಾಗಿದ್ದವು ಕೆಲವು ತಿಂಗಳ ಹಿಂದೆ ಈ ಕಾರ್ಮಿಕರು ಸಿ. ಐ. ಟಿ. ಯು. ನೇತೃತ್ವದಲ್ಲಿ ಸಂಘಟಿತರಾಗಿದ್ದರು.

ಸಂಘದ ನೇತೃತ್ವದಲ್ಲಿ ಕೆಲವು ಬೇಡಿಕೆಗಳಿಗೆ ಒತ್ತಾಯಿಸಿ ಕಳೆದ ಆಗಸ್ಟ್‌ನಲ್ಲೇ ಮನವಿ ಸಲ್ಲಿಸಲಾಗಿತ್ತು ಕಾರ್ಮಿಕ ಅಧಿಕಾರಿ ಈ ಬಗ್ಗೆ ಗಮನ ಹರಿಸುವ ಬದಲು ಮಾಲೀಕರೊಂದಿಗೆ ಶಾಮೀಲಾಗಿದ್ದ. ಒತ್ತಾಯ ಜೋರಾದಾಗ ಸಿಟಿ ಟಾಕೀಸಿನ ಮಾಲೀಕರು ಕೆಲವು ಸೌಲಭ್ಯ ಒದಗಿಸಿದರು. ಆದರೆ ಹನುಮಾನ್ ಟಾಕೀಸಿನ ಮಾಲೀಕ ತನ್ನೆಲ್ಲ ಕಾರ್ಮಿಕರನ್ನೂ 16-10-82 ರಂದು ವಜಾ ಮಾಡಿದ.

ಈ ಅನ್ಯಾಯದ ಕ್ರಮವನ್ನು ಪ್ರತಿಭಟಿಸಿ 18-10-82 ರಂದು ಎಲ್ಲಾ ಚಿತ್ರಮಂದಿರದ ಕಾರ್ಮಿಕರು ಸಿ. ಐ. ಟಿ. ಯು. ಆಫೀಸಿನಿಂದ ಮೆರವಣಿಗೆ ಹೊರಟು ಸ್ಪೆಶಲ್ ಡಿ. ಸಿ. ಗೆ ಮನವಿ ಸಲ್ಲಿಸಿದರು. ಡಿ. ಸಿ. ಯವರಿಂದ ಸೂಕ್ತ ಕ್ರಮದ ಆಶ್ವಾಸನೆ ಪಡೆದು ಲೇಬರ್ ಆಫೀಸಿಗೆ ತೆರಳಿ ಮನವಿ ಸಲ್ಲಿಸಲಾಯಿತು.

ಕೊನೆಗೂ ಪ್ರತಿಭಟನೆಗೆ ಮಣಿದ ಹನುಮಾನ್ ಟಾಕೀಸಿನ ಮಾಲೀಕರು ಎಲ್ಲಾ ಕಾರ್ಮಿಕರನ್ನೂ ವಾಪಸ್ ತೆಗೆದುಕೊಂಡರು. ಹಾಗೂ ನವ್ಹೆಂಬರ್‌ನಿಂದ ಎಲ್ಲಾ ಟಾಕೀಸುಗಳಲ್ಲಿ ಕನಿಷ್ಠ ವೇತನ (3ನೇ ಝೋನ್) ಜಾರಿಗೊಳಿಸಲಾಗಿದೆ.

ಅಪೂರ್ವ ಐಕ್ಯತೆಯನ್ನು ಪ್ರದರ್ಶಿಸಿದ ಕಾರ್ಮಿಕರನ್ನು ಪಕ್ಷದ ಅಧ್ಯಕ್ಷ ಕಾಂ| ಎಚ್. ಗೋವಿಂದರೆಡ್ಡಿ ಅಭಿನಂದಿಸಿ ಎರಡನೇ ಝೋನ್ ಕನಿಷ್ಟ ವೇತನಕ್ಕೆ ಮುಂದಿನ ಹಂತದ ಹೋರಾಟಕ್ಕೆ ಸಿದ್ಧರಾಗಲು ವಿನಂತಿಸಿದ್ದಾರೆ.

ರಾಷ್ಟ್ರೀಯ ಪ್ರಶ್ನೆ: ೮೦ರ ದಶಕದ ಸವಾಲು

—ಅಚಿಂತ್ಯ ಭಟ್ಟಾಚಾರ್ಯ

(ಕಳೆದ ಸಂಚಿಕೆಯಿಂದ)

ಅಸ್ಸಾಂ ಪ್ರಕ್ಷೋಭೆ ಈಗಿನ ಘಟ್ಟ

ಈ ಸಂಬಂಧದಲ್ಲಿ, ಅಸ್ಸಾಂನಲ್ಲಿ ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ನಡೆಸಿದ 2-2 1/2 ವರ್ಷಗಳ ಹೋರಾಟದ ಅನುಭವಗಳ ಅಭ್ಯಾಸವನ್ನು ಮಾಡುವುದು ಅನುಕೂಲವಾಗುವುದು. ಕಾರ್ಮಿಕ ವರ್ಗದ ಚಳವಳಿ ಮತ್ತು ಐಕ್ಯತೆಗೆ ಈ ಪ್ರತ್ಯೇಕತಾವಾದಿ ಚಳವಳಿಯು ಅಪಾರ ಹಾನಿಯನ್ನುಂಟುಮಾಡಿದೆ ಎಂಬುದರಲ್ಲಿ ಏನೂ ಸಂಶಯವಿಲ್ಲ.

ಈ ಚಳವಳಿಯು, ಇದೀಗ ವಿಶಾಲ ಜನ ಬೆಂಬಲವನ್ನು ಕಳೆದುಕೊಂಡಿದೆ ಮತ್ತು ನಿಧಾನವಾಗಿ ಇಳಿಮುಖವಾಗುತ್ತಾ ಬರುತ್ತಿದೆ. ಆದರೆ, ಅದರ ಆಕರ್ಷಣೆಯು ಸತ್ತು ಹೋಗಲಿಲ್ಲ ಮತ್ತು ಅದರ ನೇತೃತ್ವದ ತಿರುಳು ಇನ್ನು ಶಿಥಿಲವಾಗಲಿಲ್ಲ. ಜನತೆಯಿಂದ ದೂರೀಕರಿಸಲ್ಪಡುವ ಭಯದಿಂದ. ಚಳವಳಿಯ ಒಂದು ವಿಭಾಗವು ಜನರ ಮೇಲಿನ ತನ್ನ ಮಂಕುಮಾಡುವ ಪ್ರಭಾವವನ್ನು ಉಳಿಸಿಕೊಳ್ಳುವುದಕ್ಕಾಗಿ ವೈಯಕ್ತಿಕ ಮತ್ತು ಗುಂಪು ಸಾಹಸವಾದೀ ವಿಧಾನವನ್ನು ಅನುಸರಿಸಲು ಪ್ರಯತ್ನಿಸುತ್ತಾ ಬಂದಿದೆ. ಆದರೆ ಎಲ್ಲರಿಗೂ ಅರ್ಥವಾಗುವ ಹಾಗೆ ಈ ಹಂಚಿಕೆ ನಡೆಯುಲಿಲ್ಲ.

ಇನ್ನೊಂದೆಡೆ, ಈ ಚಳುವಳಿಯನ್ನು ವಿರೋಧಿಸುವುದರಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ನಡುವೆ ಒಮ್ಮತವು ಬಹಳ ಗಣನೀಯ ಪ್ರಮಾಣದಲ್ಲಿ ಬೆಳೆದಿದೆ. ಜನತಾದಳವು ಕೂಡ ಎಡ ಮತ್ತು ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳ ಸರ್ವಾಧಿಕಾರಿ ವಿರೋಧಿ ಒಕ್ಕೂಟದಲ್ಲಿ ತಾತ್ಕಾಲಿಕವಾಗಿ ಸೇರಿ ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಟ ಮಾಡಲು ಒಪ್ಪಿಕೊಂಡಿತ್ತು.

ಈ ಬೆಳವಣಿಗೆಗಳ ಫಲವಾಗಿ, ಈ ಪ್ರಕ್ಷೋಭೆಯ ಮುಂದಾಳುಗಳು ತಮ್ಮ ತಂತ್ರಗಳನ್ನು ಬದಲಾಯಿಸಿ ಹೊಸ ತಂತ್ರಗಳು ಯಾವುವು ಎಂಬುದನ್ನು ಹುಡುಕಲು ನಿರ್ಬಂಧಿತರಾದರು. ಈ ಸಂಧಿಯಲ್ಲಿ ಕಾಂಗ್ರೆಸ್ (ಐ) ತನ್ನ ಅಲ್ಪಸಂಖ್ಯಾತ ಗೊಗೊಯ್ ಸರಕಾರವನ್ನು ಅಸ್ಸಾಂನ ಮೇಲೆ ಹೇರಿ, ಈ ಪ್ರಕ್ಷೋಭೆಕಾರರನ್ನೂ, ನೌಕರಶಾಹಿಗಳನ್ನು ತೃಪ್ತಿಪಡಿಸಲು ಮುಂದಡಿಯಿಟ್ಟಿತು. ಗೊಗೊಯ್ ಮಂತ್ರಿ ಮಂಡಲವು ಬಿದ್ದಾಗ ಕಾಂಗ್ರೆಸ್ [ಐ] ಸರಕಾರವು ವಿಧಾನ ಸಭೆಯನ್ನು ರದ್ದುಪಡಿಸಿತು. ಮತ್ತು ಚುನಾವಣೆಯ ಆಕರ್ಷಣೆಯನ್ನು ಮುಂದೊಡ್ಡುತ್ತಾ ಒಂದುವಿಭಾಗವನ್ನು ತನ್ನೆಡೆಗೆ ಒಯ್ಯಲು ಪ್ರಯತ್ನವನ್ನು ಮಾಡುತ್ತಾ ಬರುತ್ತಿದೆ.

ಒಂದು ವರ್ಷಕಾಲದಿಂದ ಅಧಿಕ ಕಾಲ ಮಾತುಕತೆಗಳು ನಡೆದಾಗ್ಯೂ 'ವಿದೇಶಿ ರಾಷ್ಟ್ರೀಯರ' ಪ್ರಶ್ನೆಗೆ ಪರಿಹಾರ ಹುಡುಕಲು ಇಂತಹ ದೃಷ್ಟಿಕೋಣವೇ ಅಡ್ಡಿಯಾಗಿ ಬಂದಿದೆ. ತಮ್ಮ ಒಡೆದ ಸೂತ್ರಗಳ ತುದಿಗಳನ್ನು ಜತೆಕೂಡಿಸಲು ಈ ಮಾತುಕತೆಗಳ ವರದಿಯು ಈ ಪ್ರಕ್ಷೋಭೆಕಾರರಿಗೆ ಸಹಾಯಕವಾಗುತ್ತಿದೆ. ಅದನ್ನು ಪುನರುಜ್ಜೀವನಗೊಳಿಸಲು ಅವರು ಉಪಯೋಗಿಸುತ್ತಿದ್ದಾರೆ.

ಈ ವಸ್ತುಸ್ಥಿತಿಗಳ ಎದುರು ಪ್ರಕ್ಷೋಭೆಕೋರರು ತಾನು ಎಣಿಸಿದಂತೆ ವರ್ತಿಸುವರು ಎಂದು ಶ್ರೀಮತಿ ಇಂದಿರಾ ಗಾಂಧಿ ಹೇಗೆ ಈಕ್ಷಿಸುತ್ತಾರೊ ? ಸಾಮ್ರಾಜ್ಯಶಾಹಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಈ ಫಲಕ್ಕಾಗಿ ಇಂದಿರಾ ಗಾಂಧಿ ಆಶಿಸುವಂತಿದೆ. ಇದು ನಿಷ್ಪ್ರಯೋಜಕವಾಗುವುದು. ಈ ಪ್ರಕ್ಷೋಭೆಯಲ್ಲಿ ಸಾಮ್ರಾಜ್ಯಶಾಹಿಗಳು ಮಧ್ಯ ಪ್ರವೇಶ ಮಾಡಿದ್ದಾರೆ. ಅವರ ಏಜೆನ್ಸಿಗಳು ಈ ಪ್ರದೇಶದಲ್ಲಿ ತಮ್ಮ ಕಾಲುಗಳನ್ನು ಊರಿರುವರು. ಇದನ್ನು ಮರೆತು, ಯಾರೂ ಪ್ರತ್ಯೇಕವಾದೀ ಪ್ರಕ್ಷೋಭೆಯೊಡನೆ ಒಮ್ಮತಕ್ಕೆ ಬರುವುದು ಅಸಾಧ್ಯ.

"ನಾಲ್ಕನೇ ಜಗತ್ತು" ಎಂಬ ಸಿದ್ಧಾಂತ

ತಮ್ಮ ಹಳೆ ಘೋಷಣೆಗಳು ಸಾಹಸಕಾರಿ ಪ್ರಯೋಗದಲ್ಲಿ ಮೊಟಕುಗೊಂಡುದನ್ನು ಕಂಡ ಪ್ರಕ್ಷೋಭೆಯ ಮುಂದಾಳುಗಳು ಇದೀಗ ಹೊಸ ವಿಭಜನಾ ಘೋಷಣೆಗಳಿಗಾಗಿ ಹುಡುಕಾಟ ಆರಂಭಿಸಿದ್ದಾರೆ. ಎಲ್ಲಿ ಹುಡುಕಬೇಕೆಂದು ಅವರಿಗೆ ತಿಳಿದಿದೆ. ಸ್ವಲ್ಪ ಕಾಲದಲ್ಲೇ ಸಿಐಎ ಸಂಗ್ರಹಗಳಲ್ಲಿ ಅವರಿಗೆ ಒಂದು ಹೊಸ ಹಾನಿಕಾರಿ "ಮಾಯಾತಂತ್ರ" ಕಂಡು ಬಂತು. ಇದೇ "ನಾಲ್ಕನೇ ಜಗತ್ತು" ಎಂಬ ಸಿದ್ಧಾಂತ. ಈ ಹೊಸ ಬ್ರಾಂಡಿನ ನಿರೂಪಣೆಯನ್ನು ಮಾಡಿದವರು ಸಿಐಎಯ ಸುಪ್ರಸಿದ್ಧ ಅಮೇರಿಕನ್ ಪಂಡಿತ ಮತ್ತು ಸಂಶೋಧಕ ಶ್ರೀಮಾನ್ ಮ್ಯೆರಾನ್ ವೈನರ್. "ವಿದೇಶಿ-ವಿರೋಧಿ" ಚಳುವಳಿಯ ಮೂಲ ಘೋಷಣೆಗಳನ್ನು ಒದಗಿಸಿ ಕೊಟ್ಟ ಮಹಾಶಯರು ಇವರೇ. ಅವರ ಪ್ರಕಾರ 3ನೇ ಜಗತ್ತಿನೊಳಗೆ ಮೂರನೇ ಜಗತ್ತಿನ ರಾಷ್ಟ್ರಗಳಿಂದ ಶೋಷಿಸಿ ತುಳಿಯಲ್ಪಡುವ ನಾಲ್ಕನೇ ಜಗತ್ತೊಂದು ಇದೆ. ಏಷ್ಯಾ ಮತ್ತು ಆಫ್ರಿಕಾದ ಹಲವಾರು ರಾಷ್ಟ್ರಗಳಲ್ಲಿ ಗುಡ್ಡಗಾಡು ಜನರ ಗಣಗಳೂ, ಹಿಂದುಳಿದ ಜನ ವಿಭಾಗಗಳೂ, ಹಿಂದುಳಿದ ಪ್ರದೇಶಗಳೂ ಇದ್ದು ಇವು ಮೂರನೇ ಜಗತ್ತಿನೊಳಗಿನ 4ನೇ ಜಗತ್ತು. ಅಸ್ಸಾಂನಲ್ಲಿ ಕೆಲವು ಬುದ್ಧಿವಂತ ಬುದ್ಧಿಜೀವಿಗಳು ಈ ಸಿದ್ಧಾಂತವನ್ನು ಆಧರಿಸಿಕೊಂಡು, ಭಾರತದೊಳಗೆ ಅಸ್ಸಾಂ ಮತ್ತಿತರ ಆಸುಪಾಸಿನ ಗುಡ್ಡಗಾಡು ಜನ ಪ್ರದೇಶಗಳು "ಇಂತಹ ನಾಲ್ಕನೇ ಜಗತ್ತು" ಪ್ರದೇಶಗಳೆಂದು ಕಂಡುಕೊಂಡು, ಈ ಪ್ರದೇಶಗಳ ಅಭಿವೃದ್ಧಿಗಾಗಿ ಭಾರತದ ವಿರುದ್ಧ ಹೋರಾಟಕ್ಕಾಗಿ ಕರೆ ನೀಡಿದ್ದಾರೆ. ಪಾಳೆಯಗಾರೀ, ಬಂಡವಾಳಶಾಹೀ ಮತ್ತು ಸಾಮ್ರಾಜ್ಯಶಾಹೀ ಶೋಷಕರ ವಿರುದ್ಧ ಹೋರಾಡುವ ಬದಲು ಭಾರತದ ವಿರುದ್ಧದ ಈ ಹೋರಾಟಕ್ಕೆ ಅವರು ಕರೆ ಕೊಟ್ಟಿದ್ದಾರೆ. ವೈನರ್‌ನ ಈ ಸಿದ್ಧಾಂತವು ಏಷಿಯದ ಪ್ರಭಾವವೆಂಬಂತೆ, ಮೂರನೇ ಜಗತ್ತಿನ ರಾಷ್ಟ್ರಗಳಿಗೂ ಅವುಗಳ ಹಿಂದಿನ ವಸಾಹತುಶಾಹಿಗಳಿಗೂ ನಡುವಿನ ತೀವ್ರ ತಿಕ್ಕಾಟವನ್ನು ಗಾಳಿಗೆ ತೂರಿದೆ. ಆ ರಾಷ್ಟ್ರಗಳ ರಕ್ತವನ್ನು ಹೀರುತ್ತಿರುವ ಜಾಗತಿಕ ಸಾಮ್ರಾಜ್ಯಶಾಹಿಗಳನ್ನು ಮರೆತಿದೆ. ಬದಲಾಗಿ, ಬೇಟೆಗಾಗಿ ಕಾದುಹೊಂಚು ಹಾಕುತ್ತಿರುವ ಸಾಮ್ರಾಜ್ಯಶಾಹಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ, ಈ ಸಿದ್ಧಾಂತವು ಮೂರನೇ ಜಗತ್ತಿನ ರಾಷ್ಟ್ರಗಳು ತಮ್ಮೊಳಗೆ ಆಂತರಿಕ ಹೋರಾಟಗಳನ್ನು ಜನಾಂಗೀಯ ಯುದ್ಧಗಳನ್ನು ನಡೆಸುವುದಕ್ಕೆ ಪ್ರಚೋದನೆ ನೀಡುತ್ತದೆ.

ಈ 'ಸಿದ್ಧಾಂತ'ದ ಪ್ರಕಾರ ಆದಿವಾಸಿ ಗಣಗಳಿಗೆ ಸೇರಿದ ಮತ್ತು ಹಿಂದುಳಿದ ವಿಭಾಗಗಳಿಗೆ ಮತ್ತು ಪ್ರದೇಶಗಳಿಗೆ ಸೇರಿದ ದುಡಿಯುವ ಜನರೂ, ಕಾರ್ಮಿಕ ವರ್ಗದ ಒಂದು ದೊಡ್ಡ ವಿಭಾಗವೂ, ಭಾರತೀಯ ಜನತೆಯ ವಿರುದ್ಧ ತಮ್ಮ ವಿಮೋಚನೆಗಾಗಿ ಹೋರಾಡಬೇಕಾಗಿದೆ. ಬಂಡವಾಳಶಾಹಿಗಳ, ಭೂಮಾಲಿಕರ ಮತ್ತು ಸಾಮ್ರಾಜ್ಯಶಾಹಿಗಳ ಶೋಷಣೆಯ ವಿರುದ್ಧ ಹೋರಾಡುವುದಲ್ಲ !

ಈ ಜೊಳ್ಳು ಸಿದ್ಧಾಂತವನ್ನು ಇದ್ದ ಹಾಗೆ ನುಂಗುವುದಕ್ಕೆ ಸಿದ್ಧವಿರುವ ಮಂದಿಗೆ ಈ ದೇಶದಲ್ಲಿ ಕೊರತೆ ಇಲ್ಲ. ಡಾಲರುಗಳಿಗೆ ಆಕರ್ಷಿತರಾಗಿರುವಂತಹ ಮಾತ್ರವಲ್ಲ, ಅಮೇರಿಕನ್ ವಿದ್ವಾಂಸತನಕ್ಕೆ ಮತ್ತು ಅಮೇರಿಕನ್ ಸಿದ್ಧಾಂತಗಳಿಗೆ ಆಕರ್ಷಿತರಾಗಿರುವಂತಹ ಬುದ್ಧಿ ಜೀವಿಗಳು ಅಸಂಖ್ಯಾತ.

ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳನ್ನು ಶಕ್ತಿಪಡಿಸಿರಿ

ಈ ಮೇಲಿನ ನಿಜ ಸಂಗತಿಗಳು ಭಾರತದ ಪ್ರಜಾಸತ್ತಾತ್ಮಕ ಶಕ್ತಿಗಳು ಎದುರಿಸಿ ಸೋಲಿಸಲೇಬೇಕಾಗಿರುವ ಭಯಂಕರ ಅಪಾಯಕಾರಿ ಸ್ಥಿತಿಗಳನ್ನು ಬೊಟ್ಟುಮಾಡಿ ತೋರಿಸುತ್ತಿವೆ.

ಶ್ರೀಮತಿ ಗಾಂಧೀಯ ಆಳುವ ಪಕ್ಷವು ಸಾಮ್ರಾಜ್ಯಶಾಹಿಗಳ ಪಿತೂರಿಯ ಮತ್ತು ಅವರು ಅವಲಂಬಿಸುತ್ತಿರುವ ವಿಭಜನಾಶಕ್ತಿಗಳ ವಿರುದ್ಧ ಹೋರಾಡುವುದರಲ್ಲಿ ಮುತುವರ್ಜಿವಹಿಸುತ್ತಿಲ್ಲ. ಅಸ್ಸಾಂನ ಅನುಭವಗಳಿಂದ ಒಂದಂಶ ಸ್ಪಷ್ಟವಾಗಿದೆ. ಇಂದಿರಾ ಗಾಂಧಿ ಸರಕಾರವು ಕೆಲವೊಮ್ಮೆ ದೇಶದಲ್ಲಿ ಸಾಮ್ರಾಜ್ಯಶಾಹಿಗಳ ಕೈವಾಡದ ಕುರಿತು 'ಗುರುಗುರು' ಶಬ್ದ ಮಾಡುವುದಾದರೂ, ಈ ಹಾನಿಕಾರಕ ಮಧ್ಯ ಪ್ರವೇಶಕಾರರನ್ನು ಗುರುತಿಸುವ ಜಾಗ್ರತೆ ವಹಿಸುವುದಿಲ್ಲ. ಜನತೆಯ ಎದುರು ಈ ಪ್ರತ್ಯೇಕತಾವಾದಿಗಳ ನಿಜ ವೇಷವನ್ನು ಬಯಲಿಗೆಳೆಯಲು ಕ್ರಮ ವಹಿಸುತ್ತಿಲ್ಲ. ಅವರು ಅಮೇರಿಕದ ಮೇಲೆ ಎಷ್ಟೊಂದು ಅವಲಂಬಿಸಿಕೊಂಡಿದ್ದಾರೆಂದರೆ ಅವರು ಅಮೇರಿಕನ್ ಪಿತೂರಿಗಳನ್ನು ಬಯಲಿಗೆಳೆಯುವ ಸ್ಥಿತಿಯಲ್ಲೂ ಇಲ್ಲ. ಅವರು, ಅಂದರೆ, ಭಾರತ ಸರಕಾರ ಮತ್ತದರ ಮುಂದಾಳುಗಳು ಈ ಪ್ರತ್ಯೇಕವಾದಿಗಳ ಬೇಡಿಕೆಗಳನ್ನೂ, ಚಳವಳಿಯನ್ನು ಬೆಂಬಲಿಸುತ್ತಿಲ್ಲವೆಂಬುದು ನಿಜ. ಆದರೆ, ಕಾರ್ಮಿಕ ವರ್ಗ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ಈ ಪ್ರತ್ಯೇಕವಾದಿಗಳ ಆಕ್ರಮಣಗಳ ವಿಷಯದಲ್ಲಿ ಅವರು ಪ್ರತ್ಯೇಕವಾದಿಗಳ ಜತೆ ಇದ್ದಾರೆ. ಅಲ್ಲದೆ, ಅವರು ದೇಶದ ಸ್ವಾತಂತ್ರ್ಯ, ಐಕ್ಯತೆ ಮತ್ತು ಸಮಗ್ರತೆಗಳನ್ನು ರಕ್ಷಿಸುವುದರಲ್ಲಿ ಜನತೆಯನ್ನು ಉತ್ತೇಜನಗೊಳಿಸುವ ನೈತಿಕ ಶಕ್ತಿಯನ್ನೂ ನಿಜವಾದ ಅಧಿಕಾರವನ್ನು ಕಳೆದುಕೊಂಡಿದ್ದಾರೆ.

ಈ ದಿನ ಈ ಜವಾಬ್ದಾರಿಯನ್ನು ಕಾರ್ಮಿಕ ವರ್ಗವು ಕೈಗೆ ತೆಗೆದುಕೊಳ್ಳಬೇಕು.

ಅಸ್ಸಾಂನಲ್ಲಿ ಸಿಐಟಿಯು ಮತ್ತಿತರ ಕೇಂದ್ರ ಟ್ರೇಡ್ ಯೂನಿಯನುಗಳು [ಕಾಂಗ್ರೆಸ್ (ಐ) ನೇತೃತ್ವದ ಐ.ಎನ್.ಟಿ.ಯು.ಸಿ. ಬಿಟ್ಟು], ಸತತವಾಗಿ ಈ ವಿಭಜನಾಶಕ್ತಿಗಳ ಆಕ್ರಮಣಗಳನ್ನು ಎದುರಿಸುತ್ತಿರುವುದಾದರೂ, ಕಾರ್ಮಿಕ ವರ್ಗವನ್ನು ಅತಿರಾಷ್ಟ್ರೀಯವಾದಿ ಭದ್ರತೆ ಮಾಡುವುದರ ವಿರುದ್ಧ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹೋರಾಟಗಳನ್ನು ನಡೆಸುತ್ತಾ ಬರುತ್ತಿವೆ. ಅಸ್ಸಾಂನ ಕಾರ್ಮಿಕ ವರ್ಗದ ಚಳವಳಿಯನ್ನು ಅಖಿಲ ಭಾರತದ ನೆಲೆಗಳಿಂದ ಮುರಿದುಬಿಡುವುದನ್ನು ತಪ್ಪಿಸಿವೆ. ಈ ಧೀರ ಹೋರಾಟದ ಪ್ರತಿಫಲವಾಗಿಯೇ ನವೆಂಬರ್ 23ರ ದಿಲ್ಲಿ ಪ್ರದರ್ಶನಗಳಲ್ಲೂ, ಅನಂತರ ಜನವರಿ 19ರ ಪ್ರತಿಭಟನಾ ಮುಷ್ಕರದಲ್ಲೂ ಅವರ ಭಾಗವಹಿಸುವಿಕೆಯು ಎದ್ದು ತೋರುತ್ತಿದೆ.

ಈ ದಿನ ಅಸ್ಸಾಂನಲ್ಲಿ ಕಾರ್ಮಿಕ ವರ್ಗವು ನಡೆಸುತ್ತಿರುವ ಹೋರಾಟಗಳಿಗೆ ಅಖಿಲ ಭಾರತೀಯ ಮಟ್ಟದಲ್ಲಿ ಕಾರ್ಮಿಕ ವರ್ಗವು ಸಾಮ್ರಾಜ್ಯಶಾಹಿಗಳ ಮತ್ತು ಪ್ರತ್ಯೇಕತಾವಾದಿಗಳ ವಿರುದ್ಧ ಜಾಗ್ರತಿ ಮತ್ತು ಹೋರಾಟಗಳಿಗೆ ಬಲವನ್ನ ಒದಗಿಸಿಕೊಡುವುದು.

ಪ್ರತ್ಯೇಕವಾದಿಗಳ ವಿರುದ್ಧ ಮತ್ತು ಅವರ 'ವಿದೇಶಿ ಪ್ರೋತ್ಸಾಹಕರ' ವಿರುದ್ಧ ಹೋರಾಟವನ್ನು ನಡೆಸಿದರೆ ಮಾತ್ರ ಸಾಲದು. ಗುಡ್ಡಗಾಡು ಜನತೆ ಮತ್ತು ಹಿಂದುಳಿದ, ಅನಭಿವೃದ್ಧಿ ಹೊಂದಿದ, ಕಡೆಗಣಿಸಲ್ಪಟ್ಟ ಪ್ರದೇಶಗಳ ಜನತೆ, ಆಳುವ ವರ್ಗಗಳಾದ ಬಂಡವಾಳಶಾಹಿ – ಪಾಳೆಯಗಾರಿಗಳು ನಡೆಸಿಕೊಂಡು ಬಂದಿರುವ ಧೋರಣೆಗಳ ಫಲವಾಗಿ ಬಡತನ ಮತ್ತು ಹಿಂದುಳಿಯುವಿಕೆಯ 'ಬಲಿಪಶು'ಗಳಾಗಿದ್ದಾರೆ. ಆ ಕಾರಣದಿಂದಾಗಿ ಆಳುವ ವರ್ಗಗಳ ನೀತಿಗಳ ಅನರ್ಥಕಾರಿ ಪರಿಣಾಮಗಳಿಗೆ ತುತ್ತಾಗಿ ಯಾವುದೇ ವಿಮೋಚನಾ ಹಾದಿ ಕಾಣದವರಾಗಿ, ಈ ಪ್ರತ್ಯೇಕತಾವಾದಿಗಳ ಪ್ರಚಾರದ ಬಲೆಯಲ್ಲಿ ಈ ಜನತೆ ಸಿಲುಕಿಬಿದ್ದಿದೆ.

ಜನತೆಯು ಈ ವಿಭಾಗಗಳ ಜತೆ ದೃಢವಾಗಿ ನಿಂತು ಅವರ ಪ್ರಗತಿ ಮತ್ತು ಅಭಿವೃದ್ಧಿಗಾಗಿ ಕಾರ್ಮಿಕ ವರ್ಗವು ಹೋರಾಡಬೇಕಾಗಿದೆ. ಸಮಾನತೆಗಾಗಿ ಎಲ್ಲ ಜನಾಂಗೀಯ ಜನ ವಿಭಾಗಗಳಿಗೆ ಮತ್ತು ಗುಡ್ಡಗಾಡು ಜನ ವಿಭಾಗಗಳಿಗೆ ಅಭಿವೃದ್ಧಿ ಹೊಂದಿ ತೀವ್ರಗತಿಯಲ್ಲಿ ಆರ್ಥಿಕ ಉನ್ನತಿಯನ್ನು ಹೊಂದಲು ಸಮಾನ ಅವಕಾಶಗಳಿಗಾಗಿ ಮತ್ತು ನಿಜವಾದ ಸ್ವಾಯತ್ತತೆಗಾಗಿ ಕಾರ್ಮಿಕ ವರ್ಗವು ಹೋರಾಡಬೇಕಾಗಿದೆ. ಈಗಿನ ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಸರಕಾರಗಳು ಈ ವಿಷಯದಲ್ಲಿ ತೆಗೆದುಕೊಂಡ ಸರಿಯಾದ ಹೆಜ್ಜೆಗಳಿಗೆ ಕಾರ್ಮಿಕವರ್ಗವು ಬೆಂಬಲ ಕೊಡುವುದೂ ಈ ಹೋರಾಟದ ಒಂದು ಭಾಗವಾಗಿದೆ.

> ಅಸ್ಸಾಂನ ಅನುಭವಗಳಿಂದ ಒಂದಂಶ ಸ್ಪಷ್ಟವಾಗಿದೆ— ಇಂದಿರಾ ಗಾಂಧಿ ಸರಕಾರವು ಕೆಲವೊಮ್ಮೆ ದೇಶದಲ್ಲಿ ಸಾಮ್ರಾಜ್ಯಶಾಹಿಗಳ ಕೈವಾಡದ ಕುರಿತು 'ಗುರು ಗುರು' ಶಬ್ದ ಮಾಡುವುದಾದರೂ, ಈ ಹಾನಿಕಾರಕ ಮಧ್ಯ ಪ್ರವೇಶಕಾರರನ್ನು ಗುರುತಿಸುವ ಜಾಗ್ರತೆ ವಹಿಸುವುದಿಲ್ಲ.

ಭಾರತೀಯ ಜನತೆಯ ಐಕ್ಯತೆ ಮತ್ತು ಮುನ್ನಡೆಗೆ ಈ ದಶಕದಲ್ಲಿ ಸಾಮ್ರಾಜ್ಯಶಾಹಿಗಳೂ, ಪ್ರತಿಗಾಮಿ ಶಕ್ತಿಗಳೂ ಒಡ್ಡಿದ ಈ ಸವಾಲನ್ನು ದೃಢವಾಗಿ ಕಾರ್ಮಿಕ ವರ್ಗವು ಎದುರಿಸುತ್ತದೆ ಎಂಬುದರಲ್ಲಿ ಯಾವ ಸಂಶಯಕ್ಕೂ ಎಡೆಯಿಲ್ಲ.

[ಕಾಂ| ಅಚಿಂತ್ಯ ಭಟ್ಟಾಚಾರ್ಯ ಅವರು ಸಿ. ಪಿ. ಐ. (ಎಂ) ಅಸ್ಸಾಂ ಘಟಕದ ಕಾರ್ಯದರ್ಶಿಗಳಾಗಿದ್ದಾರೆ.]

○

ರೈತ ಸಂಘದ ಚಟುವಟಿಕೆಗಳು

ಕುಂದಾಪುರ :

ಕೃಷಿ ಕೂಲಿಗಾರರ ಸಭೆ

16-11-82 ರಂದು ಕುಂದಾಪುರ ತಾಲ್ಲೂಕಿನ ಹಣ್ಣಾಡಿಗ್ರಾಮದಲ್ಲಿ ಕೃಷಿ ಕೂಲಿಕಾರರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ| ಬಿ. ರಾಮ ಚಂದ್ರಪ್ಪ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರೈತ ಸಂಘದ ಜೊತೆ ಕಾರ್ಯದರ್ಶಿ ಕಾಂ| ಕೆ. ವೆಂಕಟೇಶ ನಾಯಕ್ ಮತ್ತು ಶಿವಾನಂದ ಕೋಡಿ ಇವರು ಭಾಗವಹಿಸಿದ್ದರು.

ಕಾಂ| ವೆಂಕಟೇಶ ನಾಯಕ್ ಅವರು ಮಾತನಾಡಿ ಕೃಷಿ ಕೂಲಿಗಾರರು ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಂದಾಗಬೇಕೆಂದು ತಿಳಿಸಿದರು. ಡಿಸೆಂಬರ್ 13 ರಂದು ಬೆಂಗಳೂರಿನಲ್ಲಿ ನಡೆಯಲಿರುವ "ವಿಧಾನ ಸೌಧ ಚಲೋ" ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗ್ರಾಮದ ಒಬ್ಬ ಪ್ರತಿನಿಧಿಯನ್ನು ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ಸಭೆಯಲ್ಲಿ 10 ಜನರ ತಾತ್ಕಾಲಿಕ ಕಾರ್ಯಕಾರೀ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಜಿ. ನಾರಾಯಣ, ಕಾರ್ಯದರ್ಶಿಯಾಗಿ ಎಚ್. ನಾರಾಯಣ ಹಾಗೂ 8 ಜನ ಸದಸ್ಯರುಗಳನ್ನು ಆಯ್ಕೆ ಮಾಡಲಾಯಿತು.

ಹರಪನಹಳ್ಳಿ :

ನೂತನ ಘಟಕ ಪ್ರಾರಂಭ

ಹರಪನಹಳ್ಳಿ ತಾಲ್ಲೂಕಿನ ಕೆರೆಗುಡಿಹಳ್ಳಿ ಗ್ರಾಮದಲ್ಲಿ 14-11-82ರಂದು ರೈತ ಸಂಘದ ಘಟಕವೊಂದನ್ನು ಪ್ರಾರಂಭಿಸಲಾಯಿತು. ಈ ಕುರಿತು ನಡೆದ ಬಹಿರಂಗಸಭೆಗೆ ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಂಚಾಲಕ ಕಾಂ|| ಪಿ. ಆರ್. ವೆಂಕಟೇಶ್ ಆಗಮಿಸಿದ್ದರು. ಅಧ್ಯಕ್ಷತೆಯನ್ನು ತಾಲ್ಲೂಕು ಸಂಚಾಲಕ ಕಾಂ|| ಬಿ. ಪರಶುರಾಮ ವಹಿಸಿದ್ದರು. ಕಾಂ| ವೆಂಕಟೇಶ್ ಅವರು ಮಾತನಾಡಿ ರೈತ ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ನೂತನ ಘಟಕದ ಅಧ್ಯಕ್ಷರಾಗಿ ಬಿ. ಬಸವರಾಜಪ್ಪ, ಉಪಾಧ್ಯಕ್ಷರಾಗಿ ಗೋಣಿ ಬಸಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ರಾಮಪ್ಪ, ಕಾರ್ಯದರ್ಶಿಯಾಗಿ ಮರುಳು ಸಿದ್ಧಪ್ಪ, ಸಂಚಾಲಕರಾಗಿ ಕೆ. ತಿಮ್ಮಣ್ಣ ಹಾಗೂ ಸಹ ಸಂಚಾಲಕರಾಗಿ ಕೆ. ದ್ವಾರಕಾಚಾರಿ ಇವರುಗಳನ್ನು ಆಯ್ಕೆ ಮಾಡಲಾಯಿತು.

ಅರಸೀಕೆರೆ :

ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಗ್ರಾಮದಲ್ಲಿ 10-11-82 ರಂದು ರೈತ ಸಂಘದ ಘಟಕ ಆರಂಭಿಸಲಾಯಿತು. ಈ ಕುರಿತು ನಡೆದ ಬಹಿರಂಗ ಸಭೆಯಲ್ಲಿ ಸುಮಾರು 400 ಜನ ಭಾಗವಹಿಸಿದ್ದರು. ಜಿಲ್ಲಾ ಹಾಗೂ ತಾಲ್ಲೂಕು ಸಂಚಾಲಕರಾದ ಕಾಂ| ಪಿ. ಆರ್. ವೆಂಕಟೇಶ್, ಬಿ. ಪರಶುರಾಮ ಆಗಮಿಸಿದ್ದರು.

ನೂತನ ಗ್ರಾಮ ಘಟಕದ ಪದಾಧಿಕಾರಿಗಳು ಇಂತಿದ್ದಾರೆ.

ಅಧ್ಯಕ್ಷರಾಗಿ :ಡಿ. ಎಂ. ಇನೋಸ್ ಸಾಹೇಬ್, ಉಪಾಧ್ಯಕ್ಷರಾಗಿ ಸಿ ನಿಂಗಪ್ಪ, ಕಾರ್ಯದರ್ಶಿಯಾಗಿ ಕೆ. ಎಂ. ತಿಪ್ಪೇಸ್ವಾಮಿ, ಸಹ ಕಾರ್ಯದರ್ಶಿಯಾಗಿ ಎ. ಬಿ. ಶಿವಕುಮಾರ್ ಮತ್ತು ಸಂಚಾಲಕರಾಗಿ ದುರುಗಪ್ಪ ಕುಂಚೂರು ಇವರನ್ನು ಆಯ್ಕೆ ಮಾಡಲಾಯಿತು.

ರೈತರ ಮತಪ್ರದರ್ಶನ

1-11-82 ರಂದು ಹರಪನಹಳ್ಳಿ ತಾಲ್ಲೂಕಿನ ಹಳ್ಳಿಗಳ ರೈತರು, ತಮ್ಮ ಬೇಡಿಕೆಗಳಿಗೆ ತುರ್ತು ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿ ತಹಸೀಲ್ದಾರರ ಕಚೇರಿ ಮುಂದೆ ಮತಪ್ರದರ್ಶನ ನಡೆಸಿದರು. ಈ ಮತ ಪ್ರದರ್ಶನದಲ್ಲಿ ಸುಮಾರು 600 ಜನ ರೈತರು ಭಾಗವಹಿಸಿದ್ದರು. ಕಾರ್ಯಕ್ರಮದ ನೇತೃತ್ವವನ್ನು ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಬಿ. ಎನ್. ಹಳಕಟ್ಟಿ ನಿತ್ಯಾನಂದ ಸ್ವಾಮೀಜಿ, ಕಾಂ| ಪಿ. ಆರ್. ವೆಂಕಟೇಶ್, ಕಾಂ| ಬಿ. ಪರಶುರಾಮ ವಹಿಸಿದ್ದರು.

ತುರ್ತು ಬೇಡಿಕೆಗಳು :

1) ತಾಲ್ಲೂಕಿನ ಬರಗಾಲ ಪೀಡಿತ ಪ್ರದೇಶಗಳಿಗೆ ಶಾಶ್ವತ ಕಾಮಗಾರಿಯನ್ನು ಪ್ರಾರಂಭಿಸಬೇಕು.

2) ಹೆಚ್ಚುವರಿ ಭೂಮಿಯನ್ನು ಭೂ ಹೀನರಿಗೆ ಹಂಚಬೇಕು.

3) ಯೋಗ್ಯ ರೀತಿಯಲ್ಲಿ ಬ್ಯಾಂಕ್ ಸಾಲ ಸೌಲಭ್ಯಗಳು ದೊರೆಯುವಂತೆ ಮಾಡಬೇಕು... ಇತ್ಯಾದಿ ...9 ಬೇಡಿಕೆಗಳ ಮನವಿ ಪತ್ರವನ್ನು ತಹಸಿಲ್ದಾರರಿಗೆ ಸಲ್ಲಿಸಲಾಯಿತು.

ನಂತರ ಹಳೇ ಬಸ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ| ಹಳಕಟ್ಟಿ, ನಿತ್ಯಾನಂದ ಸ್ವಾಮೀಜಿ, ಕಾಂ| ವೆಂಕಟೇಶ ಮತ್ತು ಶ್ರೀ ಎಂ. ಪಿ. ಪ್ರಕಾಶ್ ಅವರು ಮಾತನಾಡಿ ಹೋರಾಟ ಮುಂದುವರಿಸಲು ಕರೆ ನೀಡಿದರು.

ತುಮಕೂರು :

ಪಶು ಚಿಕಿತ್ಸಾ ಘಟಕದ ಉದ್ಘಾಟನೆ

ತುಮಕೂರು ಕಸಬಾ ಊರುಕೆರೆಯಲ್ಲಿ ನವೆಂಬರ್ 6 ರಂದು ಜಿಲ್ಲಾ ಪಶುವೈದ್ಯ ಇಲಾಖಾ ಮುಖ್ಯಾಧಿಕಾರಿಯವರಿಂದ ಪಶುವೈದ್ಯ ಚಿಕಿತ್ಸಾ ಘಟಕವನ್ನು ಉದ್ಘಾಟಿಸಲ್ಪಟಿತು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ| ಟಿ. ಕೆ. ಗೋವಿಂದರಾಜು ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಪಂಚಾಯ್ತಿ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಅಂಜನಪ್ಪ, ರೈತ ಸಂಘದ ಕಾಂ||ಬಿ. ಚಿಕ್ಕವೀರಯ್ಯ, ರೈತ ಸಂಘದ ಉಪಾಧ್ಯಕ್ಷ ಪಂಡಿತ ದಾಸಪ್ಪ ಅವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಕ್ಯಾಪ್ಟನ್ ರಾಮು (ಇಲಾಖಾ ಮುಖ್ಯಾಧಿಕಾರಿ) ಅವರು ಮಾತನಾಡಿ, ಇಲಾಖೆಯ ವತಿಯಿಂದ ಒದಗಿಸಲ್ಪಡುವ ಸೌಲಭ್ಯಗಳನ್ನು ಪಡೆಯುವಂತೆ ಅವರು ಮನವಿ ಮಾಡಿದರು. ಇನ್ನು ಮುಂದೆ ಪ್ರತಿವಾರ ಸಂಚಾರಿ ಪಶುವೈದ್ಯ ಚಿಕಿತ್ಸಾ ಘಟಕದ ಮೂಲಕ ಚಿಕಿತ್ಸಾ ಸೌಲಭ್ಯ ಒದಗಿಸುವ ಭರವಸೆ ನೀಡಿದರು.

ಸಾಮೂಹಿಕ ಸತ್ಯಾಗ್ರಹ

(5ನೇ ಪುಟದಿಂದ)

ಈ ಕಾರ್ಯಕ್ರಮದಲ್ಲಿ ಹಂಚು, ಪ್ರೆಸ್, ಬೀಡಿ, ನೈಗೆ, ಗೋಡಂಬಿ, ಅಡಿಕೆ, ಕಾಫಿ ಮತ್ತು ಇನ್ನಿತರ ಇಂಜಿನೀಯರಿಂಗ್ ಕೈಗಾರಿಕೆಗಳಲ್ಲಿ ದುಡಿಯುವ ಸಾವಿರಾರು ಕಾರ್ಮಿಕರು ಮುಷ್ಕರ ನಡೆಸಿ ಮೇಲ್ಕಾಣಿಸಿದ ಕಛೇರಿಗಳ ಎದುರು ಸಾಮೂಹಿಕ ಸತ್ಯಾಗ್ರಹ ನಡೆಸಿದರು.

ಇವರಿಗೆ ಬೆಂಬಲವಾಗಿ ಮಂಗಳೂರು ನಗರದ ಸಿಟಿ ಬಸ್ ನೌಕರರು ಎರಡು ಗಂಟೆ ಕಾಲ ಸಾಂಕೇತಿಕ ಮುಷ್ಕರ ನಡೆಸಿ ಬೆಂಬಲ ವ್ಯಕ್ತಪಡಿಸಿದರು.

ಸರಕಾರದ ಕಾರ್ಮಿಕ ವಿರೋಧಿ ನೀತಿಗೆ ವಿರುದ್ಧ ನಡೆಸಿದ ಈ ಪ್ರತಿಭಟನೆಗೆ ಭಾಗವಹಿಸಿದ ಎಲ್ಲಾ ಕಾರ್ಮಿಕರನ್ನು ಸಿ.ಐ.ಟಿ.ಯು.ವಿನ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ| ಮೂಸಬ್ಬ ಅಭಿನಂದಿಸಿರುತ್ತಾರೆ.

ಮೇಲ್ಕಾಣಿಸಿದ ಇಲಾಖೆಗಳಲ್ಲಿ ಮಜೂರರಿಗೆ ಆಗುವ ಅನ್ಯಾಯವನ್ನು ನಿಲ್ಲಿಸದಿದ್ದರೆ ಹೋರಾಟವು ಇನ್ನೂ ಮುಂದುವರಿಯುವುದು. ಮಾತ್ರವಲ್ಲ ತೀವ್ರ ತರಹದ ಹೋರಾಟಕ್ಕೆ ಜಿಲ್ಲೆಯ ಕಾರ್ಮಿಕರು ಸಿದ್ಧರಾಗುವಂತೆ ಕರೆ ನೀಡಲಾಗಿದೆ.

ಅಭಿನಂದನೆ

ಲೇಬರ್ ಇಲಾಖೆ, ಪ್ರಾವಿಡೆಂಡ್ ಫಂಡ್ ಮತ್ತು ಇ.ಎಸ್.ಐ. ಇಲಾಖೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಅವರ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಸಿ ಐ. ಟಿ. ಯು. ಮತ್ತು ಎ.ಐ.ಟಿ.ಯು.ಸಿ. ಸಂಯುಕ್ತವಾಗಿ ನೀಡಿದ ಕರೆಯಂತೆ ತಾರೀಕು 9-11-1982 ರಂದು ಮಂಗಳೂರಿನ ಹಂಚು, ಗೋಡಂಬಿ, ಪ್ರೆಸ್, ಅಡಿಕೆ, ಕಾಫಿ, ನೈಗೆ, ಮೋಟಾರು ಇಂಜಿನಿಯರಿಂಗ್ ಮತ್ತಿತರ ಕೈಗಾರಿಕೆಗಳ ಸಹಸ್ರಾರು ಕಾರ್ಮಿಕರು ಯಶಸ್ವೀ ಮುಷ್ಕರ ನಡೆಸಿ, ಸಾಮೂಹಿಕ ಸತ್ಯಾಗ್ರಹ ನಡೆಸಿದ ಕಾರ್ಮಿಕರನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ| ಕೆ. ಆರ್. ಶ್ರೀಯಾನರು ಅಭಿನಂದಿಸಿದ್ದಾರೆ.

ಎಸ್. ಎಫ್. ಐ. ಚಟುವಟಿಕೆಗಳು

ಬೆಂಗಳೂರು :

6-11-82 ರಂದು ಎಸ್.ಎಫ್.ಐ. ನಗರ ಸಮಿತಿಯ ಸಭೆಯು ನಡೆಯಿತು. ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಗಿದೆ. ಪದಾಧಿಕಾರಿಗಳು ಇಂತಿದ್ದಾರೆ :

ಅಧ್ಯಕ್ಷರಾಗಿ ಕೆ. ಸುಶೀಲ, ಉಪಾಧ್ಯಕ್ಷರಾಗಿ ಜಗದೀಶ್ ಮತ್ತು ಎಸ್. ಪಿ. ಕೃಷ್ಣಪ್ಪ, ಕಾರ್ಯದರ್ಶಿಯಾಗಿ ಜಿ. ಎನ್. ಮೋಹನ್, ಸಹ ಕಾರ್ಯದರ್ಶಿಗಳಾಗಿ ಬಿ. ಎನ್. ರಾಮಚಂದ್ರ ಮತ್ತು ಶ್ರೀಧರ ಹಾಗೂ ಖಜಾಂಚಿಯಾಗಿ ಟಿ. ವಿ ಶೋಭಾ.

ನಂತರ ನಡೆದ ಸಮಿತಿಯ ಸಭೆಯಲ್ಲಿ 82-83 ರ ಸಾಲಿನ ಕಾರ್ಯಕ್ರಮಗಳ ಬಗ್ಗೆ ಧೀರ್ಘ ಚರ್ಚೆ ನಡೆಸಲಾಯಿತು.

ಈ ವರ್ಷವೂ ಸಹ ಬೆಂಗಳೂರು ನಗರ ಸಮಿತಿಯು ಸಾಂಸ್ಕೃತಿಕ ತಂಡ, ಗ್ರಂಥ ಭಂಡಾರ, ಅಧ್ಯಯನ ಕೂಟಗಳನ್ನು ಮುಂದುವರೆಸುವ ಯೋಜನೆಯನ್ನು ಹೊಂದಿದೆ.

ರಾಯಚೂರು :

ಜಿಲ್ಲಾ ಸಮ್ಮೇಳನ

ನವೆಂಬರ್ 28, 29, ರಂದು ಸಿಂಧನೂರಿನಲ್ಲಿ ಎಸ್. ಎಫ್. ಐ. ಜಿಲ್ಲಾ ಘಟಕದ ಎರಡನೇ ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿದೆ.

ಸಮ್ಮೇಳನಕ್ಕೆ ಎಸ್. ಎಫ್. ಐ. ಅಧ್ಯಕ್ಷ ಕಾಂ| ಎಂ. ಎ ಬೇಬಿ, ಕಾರ್ಯಕಾರಿ ಮಂಡಳಿ ಸದಸ್ಯ ಎ. ಕೆ. ಬಾಲನ್ ಹಾಗೂ ಸೈಫುದ್ದೀನ್ ಚೌದರಿಯವರು ಆಗಮಿಸುವ ನಿರೀಕ್ಷೆಇದೆ ಎಂದು ಎಸ್. ಎಫ್. ಐ. ಜಿಲ್ಲಾ ಸಮಿತಿ ತಿಳಿಸಿದೆ.

ಕುಂದಾಪುರ :

ಗೋವಾದ ದುಷ್ಕೃತ್ಯ : ಎಸ್. ಎಫ್. ಐ. ಖಂಡನೆ

'ಗೋವಾ ಗೋವನ್ನರಿಗೆ' ಎಂಬ ಸಂಕುಚಿತವಾದಿ ಘೋಷಣೆಯ ಆಧಾರದಲ್ಲಿ ಗೋವಾದ ವಿಚ್ಛಿದ್ರಕಾರಕ ಶಕ್ತಿಗಳು ಇತರ ರಾಜ್ಯಗಳ ಜನತೆಯ ಮೇಲೆ ನಡೆಸಿರುವ ಹಲ್ಲೆಯನ್ನು ಎಸ್. ಎಫ್. ಐ. ಕುಂದಾಪುರ ಟೌನ್ ಸಮಿತಿ ತೀವ್ರವಾಗಿ ಖಂಡಿಸಿದೆ. ಪ್ರಾದೇಶಿಕ ಹಾಗೂ ಭಾಷೆಯ ಆಧಾರದಲ್ಲಿ ಜನತೆಯನ್ನು ಒಡೆಯುವ ವಿಚ್ಛಿದ್ರಕಾರಕ ಶಕ್ತಿಗಳನ್ನು ಹತೋಟಿಗೆ ತಂದು, ಅಲ್ಪಸಂಖ್ಯಾತರಿಗೆ ಎಲ್ಲಾ ರೀತಿಯ ರಕ್ಷಣೆ ನೀಡಬೇಕೆಂದು ಗೋವಾ ಸರಕಾರವನ್ನು ಒತ್ತಾಯಿಸಿದೆ.

ಬೆಂಗಳೂರು :

ಪ್ರತಿಭಟನಾ ಪ್ರದರ್ಶನ

ಡೊನೇಷನ್ - ಕ್ಯಾಪಿಟೇಷನ್ ಫೀ ರದ್ದತಿ, ಪ್ರತಿ ತಾಲ್ಲೂಕು ಕೇಂದ್ರದಲ್ಲೂ ಹಾಸ್ಟೆಲ್ ಸೌಕರ್ಯ, ಕ್ಷಾಮ ಪೀಡಿತ ಬೆಂಗಳೂರು ಜಿಲ್ಲೆಯ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ, ಪರೀಕ್ಷಾ ಶುಲ್ಕದ ವಿನಾಯಿತಿ, ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮ ತರಗತಿಗಳು— ಈ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಎಸ್. ಎಫ್. ಐ. ಜಿಲ್ಲಾ ಸಮಿತಿಯ ನೇತೃತ್ವದಲ್ಲಿ 10-11-82 ರಂದು ಮತಪ್ರದರ್ಶನ ನಡೆಸಿದರು.

ಕಾಂ| ಎನ್.ರಾಜಣ್ಣ, ಎಸ್.ಆರ್. ಆರಾಧ್ಯ, ಮತ್ತು ಕಾಂ| ಜಿ. ಎನ್. ಮೋಹನ್ ಇವರನ್ನೊಳಗೊಂಡ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿ ಮನವಿ ಸಲ್ಲಿಸಿತು.

ಅಥಣಿ :

ಎಸ್. ಎಫ್. ಐ. ಘಟಕದ ಉದ್ಘಾಟನೆ

ನವೆಂಬರ್ 7 ರಂದು ಬೆಳಗಾಂಜಿಲ್ಲೆಯ ಅಥಣಿಯಲ್ಲಿ ಎಸ್. ಎಫ್. ಐ. ಶಾಖೆಯ ಉದ್ಘಾಟನಾ ಸಮಾರಂಭ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ| ಎಸ್. ಆರ್. ಆರಾಧ್ಯ ವಹಿಸಿದ್ದರು. ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ವೈದ್ಯರಾಗಿರುವ ಡಾ|| ಸಂಜೀವ ಕುಲಕರ್ಣಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಕುಲಕರ್ಣಿಯವರು ಮಾತನಾಡಿ, ವಿದ್ಯಾರ್ಥಿಗಳು ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕೆಂದು ನುಡಿದರು.

ಎಸ್. ಎಫ್. ಐ. ಘಟಕದವರು ಆರಂಭಿಸಿರುವ "ಶಹೀದ ಭಗತಸಿಂಗ್ ವಾಚನಾಲಯ"ವನ್ನು ಅವರು ಉದ್ಘಾಟಿಸಿದರು. ಕಾಂ| ಆರಾಧ್ಯಅವರು ಮಾತನಾಡಿ ಎಸ್.ಎಫ್.ಐ. ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಇತ್ತೀಚೆಗೆ ಎಸ್. ಎಫ್. ಐ. ವತಿಯಿಂದ ನಡೆಸಲಾದ ಸಾಮಾನ್ಯ ಜ್ಞಾನ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಗಳಿಗೆ ಕಾಂ| ಆರಾಧ್ಯ ಅವರು ಪಶಸ್ತಿ ಪುಸ್ತಕಗಳನ್ನು ನೀಡಿದರು. ಸಭೆಯನ್ನುದ್ದೇಶಿಸಿ ವಿದ್ಯಾರ್ಥಿ ಸಂಗಾತಿಗಳಾದ ಮಲ್ಲಪ್ಪ ಹುಣಾಶೀ ಮೋರೆ, ಅಶೋಕ ಉಮರ್ಜಿ ಹಾಗೂ ಕುಮಾರಿ ತೃಪ್ತಿ ಭಾಟೆ ಅವರೂ ಮಾತನಾಡಿದರು.

"ಶಿಕ್ಷಣ, ವಿಜ್ಞಾನ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ಅವುಗಳ ಪಾತ್ರ" ಹಾಗೂ 'ಹಿರೋಶಿಮಾ-ಒಂದು ನೆನಪು' ಎಂಬೆರಡು ವಿಷಯಗಳ ಕುರಿತು ಭಿತ್ತಿಚಿತ್ರ ಪ್ರದರ್ಶನ ಹಾಗೂ ಪುಸ್ತಕ ಪ್ರದರ್ಶನ –ಇವು ಸಮಾರಂಭದ ವಿಶೇಷ ಆಕರ್ಷಣೆಗಳಾಗಿದ್ದವು.

೨೪ನೆಯ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನ

(1ನೇ ಪುಟದಿಂದ)

ಮೂರುವರೆ ವರ್ಷಗಳ ಅವಧಿಯಲ್ಲಿ ರೈತರ ಐಕ್ಯ ಹೋರಾಟ ಬೆಳೆದು ಬಂದಿರುವುದನ್ನು ಎತ್ತಿಹೇಳಿ, ಬದಲಾದ ಪರಿಸ್ಥಿತಿಯನ್ನೂ, ನಮ್ಮೆದುರುಗಿರುವ ತುರ್ತು ಕರ್ತವ್ಯಗಳನ್ನೂ ತೋರಿಸಿಕೊಟ್ಟರು. ಈ ಸಮ್ಮೇಳನದ ಮುಂದಿನ ಕಾಲಘಟ್ಟದಲ್ಲಿ ನಾವು ಬಹಳ ಜವಾಬ್ದಾರಿಯಿಂದಲೂ, ತೀವ್ರಗತಿಯಿಂದಲೂ ರೈತರ ಐಕ್ಯತೆ, ಹೋರಾಟ ಸಂಘಟನೆಗೆ ತೊಡಗುವಂತಾಗಲು ಮಾರ್ಗದರ್ಶನ ಮೂಡಿ ಬರುವಂತೆ ಸಮ್ಮೇಳನವು ವಿಚಾರ ವಿನಿಮಯ ನಡೆಸಬೇಕೆಂದು ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಕಾಂ|| ಚಾತುನ್ನಿ ಮಾಸ್ಟರ್ ಅವರು 76 ಪುಟ (ಅಚ್ಚು ಹಾಕಿದ್ದ)ದ ಸುಧೀರ್ಘ ವರದಿಯನ್ನು ಪರಿಚಯಿಸಿ ಸೂಕ್ತ ರೀತಿಯಲ್ಲಿ ಚರ್ಚೆಮಾಡಲು ಕರೆ ನೀಡಿದರು. ಕಾಂ| ಪಿ. ಕೆ. ಕುಂಜಚನ್ ಅವರು ಅಖಿಲ ಭಾರತ ಕೃಷಿಕೂಲಿಗಾರರ ಸಂಘದ ವರದಿ ನೀಡಿದರು. ಕಾಂ| ಇ.ಎಂ ಎಸ್. ಅವರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪರವಾಗಿ, ಸಿ. ಪಿ. ಐ. ನೇತೃತ್ವದ ಅಖಿಲ ಭಾರತ ಕಿಸಾನ ಸಭಾದ ಅಧ್ಯಕ್ಷ ಕಾಂ| ಝಡ್. ಎ. ಅಹ್ಮದ್ ಅವರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ದಿನಾಂಕ 9-11-82 ರಂದು ಇಡೀ ದಿವಸ ವಿವಿಧ ರಾಜ್ಯಗಳ ಪ್ರತಿನಿಧಿಗಳು ಅವರವರ ರಾಜ್ಯಗಳ ಹೋರಾಟ, ಸಂಘಟನೆ ಆಧರಿಸಿ ವರದಿಯ ಮೇಲೆ ಚರ್ಚೆ ನಡೆಸಿದರು. ಚರ್ಚೆಯಲ್ಲಿ ಸುಮಾರು 30 ಸಂಗಾತಿಗಳು ಪಾಲ್ಗೊಂಡು ವಿವಿಧ ರಾಜ್ಯಗಳಲ್ಲಿ ಬೆಳೆದು ಬಂದ ರೈತ ಹೋರಾಟ ಮತ್ತು ಅಲ್ಲಿಯ ಕೃಷಿ ಪರಿಸ್ಥಿತಿ, ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ಮಾಡಿದರು. ಚರ್ಚೆ ಬಹಳ ಗಂಭೀರವಾಗಿತ್ತಲ್ಲದೇ ಭಾರತದ ರೈತ ಹೋರಾಟದ ವಿವಿಧ ಮುಖಗಳನ್ನು ಮತ್ತು ಕೃಷಿ ಸಮಸ್ಯೆಯ ಹಲವಾರು ಅಂಶಗಳನ್ನು ಪರಿಚಯಿಸುವಂತಾಗಿತ್ತು.

ಕಾಂ| ಹರಿಕಿಷನ್‌ಸಿಂಗ್ ಸುರ್ಜೀತ್ ಅವರು ಪ್ರಧಾನ ಕಾರ್ಯದರ್ಶಿಯವರ ವರದಿ ಮೇಲೆ ಬಂದ ಚರ್ಚೆಯನ್ನು ಸಮಾಲೋಚಗೊಳಿಸಿ, ಹಲವಾರು ಸಂಗಾತಿಗಳು ಎತ್ತಿದ ಕೆಲವು ಪ್ರಮುಖ ವಿಚಾರಗಳನ್ನು ಪ್ರಶ್ನೆಗಳನ್ನುಎತ್ತಿಕಿಸಾನ ಸಭಾ ನಿಲುವಿನ ಹಿನ್ನೆಲೆಯಲ್ಲಿವಿಮರ್ಶಿಸಿ, ವಾರಣಾಸಿ ಸಮ್ಮೇಳನದ ನಿರ್ಣಯಗಳ ನಂತರದ ಅನುಭವ,ಹೋರಾಟದ ಹಿನ್ನೆಲೆಯಲ್ಲಿ ಸತ್ಯಾಂಶ ಸಿದ್ಧಪಡಿಸಿ ಕೊಟ್ಟಿದ್ದೇ ಅಲ್ಲದೇ ಆ ನಿಲುವನ್ನು ಇನ್ನೂ ಸ್ಪಷ್ಟವಾಗಿ ಪ್ರತಿನಿಧಿಗಳಿಗೆ ಮನಗಾಣಿಸಿ ಕೊಟ್ಟರು.

10-11-82 ರಂದು 28 ಮಹತ್ವಪೂರ್ಣ ನಿರ್ಣಯಗಳನ್ನು, ಕೃಷಿಕರ ಪರಿಸ್ಥಿತಿ, ಸಮಸ್ಯೆಗಳ ಆಧಾರಿಸಿ ಮೊದಲೇ ಕರಡು ಸಿದ್ಧ ಪಡಿಸಿಟ್ಟಿದ ಗೊತ್ತುವಳಿಗಳನ್ನು ಪ್ರತಿನಿಧಿಗಳ ಸಭೆಯಲ್ಲಿ ಮಂಡಿಸಿ ಅವುಗಳ ಮೇಲೆ ಚರ್ಚೆ ನಡೆಸಿ ಸರ್ವಾನುಮತದಿಂದ ಒಪ್ಪಿಕೊಳ್ಳಲಾಗಿದೆ. ನಿರ್ಣಯಗಳು ಬೇರೆ ಬೇರೆ ರಾಜ್ಯಗಳಲ್ಲಿ ಅಲ್ಲಿಯ ಪರಿಸ್ಥಿತಿಗನುಗುಣವಾಗಿ ಮತ್ತು ನಿಷ್ಪವಾಗಿ ಗುರುತಿಸಿಕೊಂಡು ಹೋರಾಟವನ್ನು ರೂಪಿಸಿಕೊಳ್ಳುವಲ್ಲಿ ಮಹತ್ವದ ಮಾರ್ಗದರ್ಶನ ನೀಡುವಂತಿವೆ.

11-11-82 ರಂದು ಆಂದ್ರದ ಕಾಂ| ಯು. ರಾಮಮ್ ಅಧ್ಯಕ್ಷರಾಗಿರುವ ಮತ್ತು 125 ಜನರ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸರ್ವಾನುಮತದಿಂದ ಚುನಾಯಿತಗೊಂಡಿತು. ಕರ್ನಾಟಕದಿಂದ ಕಾಂ|| ಪಿ. ರಾಮಚಂದ್ರರಾವ್, ವಿ. ಎನ್ ಹಳಕಟ್ಟಿ ಮತ್ತು ಪಿ. ಜಗನ್ನಾಥ ಕೌನ್ಸಿಲ್‌ಗೆ ಆಯ್ಕೆಗೊಂಡಿದ್ದಾರೆ. ನಂತರ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸೇರಿ 37 ಜನರ ಕೇಂದ್ರ ಕಿಸಾನ್ ಕಮಿಟಿಯನ್ನು (ಸಿ. ಕೆ. ಸಿ.), ಉಳಿದ ಪದಾಧಿಕಾರಿಗಳನ್ನು ಚುನಾಯಿಸಿತು. ಕೇಂದ್ರ ಕಿಸಾನ ಕಮಿಟಿಗೆ ಕರ್ನಾಟಕದಿಂದ ಕಾಂ| ಪಿ. ರಾಮಚಂದ್ರರಾವ್ ಚುನಾಯಿತರಾಗಿದ್ದಾರೆ.

ಕಾಂ| ಹರಿಕಿಷನ್‌ಸಿಂಗ್ ಸುರ್ಜೀತ್ ಬಿನಾಯ್ ಕೃಷ್ಣ ಚೌದರಿ, ಎಂ. ಎ. ರಸೂಲ, ಗೋದಾವರಿ ಪರುಳೇಕರ ಇವರುಗಳು ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಕಾಂ| ಶಾಂತಿಲಿಕೊಯ್ ಘೋಷ್ ಪ್ರಧಾನ ಕಾರ್ಯದರ್ಶಿಯಾಗಿಯೂ, ಚಾತುನ್ನಿ ಮಾಸ್ಟರ್, ಶಂಕರಯ್ಯ ಮತ್ತು ಪಿ.ಕೆ.ತುಂಡನ್ ಇವರುಗಳು ಸಹಾಯಕ ಕಾರ್ಯದರ್ಶಿಗಳಾಗಿ ಚುನಾಯಿತಗೊಂಡಿದ್ದಾರೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಬೆಳಗಿನ ಪ್ರತಿನಿಧಿ ಸಭೆಯನ್ನು ಪ್ರತ್ಯೇಕವಾಗಿ ನಡೆಸಿ ಪದಾಧಿಕಾರಿಗಳನ್ನು ಚುನಾಯಿಸಿದೆ. ಕಾಂ| ಪಿ. ಕೆ. ಕುಂಜಚನ್ ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರೆದಿದ್ದಾರೆ.

11-11-82ರ ಸಂಜೆ ಮಿಡ್ನಾಪುರದ ವಿಶಾಲ ಬಯಲಿನಲ್ಲಿ ಜನಸಾಗರವು ಉಕ್ಕಿ ಹರಿದಂತೆ 7 ಲಕ್ಷಕ್ಕು ಮಿಕ್ಕಿ ಜನ ಪಾಲ್ಗೊಂಡಿದ್ದ ಬೃಹತ್ ಬಹಿರಂಗ ಸಭೆ ನಡೆಯಿತು. ಕಾಂ| ಬಿನಾಯ್ ಕೃಷ್ಣ ಚೌಧರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಂ| ಇ. ಎಂ. ಎಸ್., ಸುರ್ಜೀತ್, ಗೋದಾವರಿ ಪರುಳೇಕರ್, ತ್ರಿಪುರಾದ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಮತ್ತು ಕಾಂ| ಜ್ಯೋತಿಬಸು ಮಾತನಾಡಿ ಕಿಸಾನ್ ಸಮ್ಮೇಳನ ಯಶಸ್ವಿಯಾಗಿ ನಡೆದುದ್ದರ ಬಗ್ಗೆಯೂ, ಅದರ ನಿರ್ಣಯಗಳ ಬಗ್ಗೆಯೂ, ದೇಶದಲ್ಲಿ ಬಲಿಷ್ಟ ರೈತ ಹೋರಾಟ ಕಟ್ಟಿ ಬೆಳೆಸುವ ಬಗ್ಗೆಯೂ, ಎಡ ಪ್ರಜಾಪ್ರಭುತ್ವ ಶಕ್ತಿಗಳು ಐಕ್ಯ ಹೋರಾಟ ನಡೆಸುವ ಬಗ್ಗೆಯೂ ಮಾತನಾಡಿ ಸರ್ವಾಧಿಕಾರಿ, ಕೋಮುವಾದಿ, ಪ್ರತ್ಯೇಕತಾವಾದಿ ಶಕ್ತಿಗಳನ್ನು ಸೋಲಿಸಲು ಕರೆ ಕೊಡಲಾಯಿತು.

ಸಮ್ಮೇಳನ ಅತ್ಯಂತ ಯಶಸ್ವಿ ಸಮ್ಮೇಳನವಾಗಿ ಪರಿಣಮಿಸಿತು. ಸ್ಫೂರ್ತಿಗೊಂಡ ಪ್ರತಿನಿಧಿಗಳು ಹೊಸ ಹುರುಪಿನಿಂದ ತಮ್ಮರಾಜ್ಯದಲ್ಲಿ ಇನ್ನೂ ಬಲಿಷ್ಟ ರೈತ ಸಂಘಟನೆ, ಹೋರಾಟ ಕಟ್ಟಿ ಬೆಳೆಸಲು ನಿರ್ಧರಿಸಿ ಮರಳಿದರು.

—ವರದಿ : ವಿ. ಎನ್. ಹಳಕಟ್ಟಿ

○

ಬೆಂಗಳೂರು :

ಪ್ರತಿಭಟನಾ ಧರಣಿ

ಬಿ. ಪಿ. ಇ. ನಿರ್ದೇಶನಗಳನ್ನು ಪ್ರತಿಭಟಿಸಿ, ವೇತನ ಸ್ಥಗಿತವನ್ನು ವಿರೋಧಿಸಿ, ಏಕಸ್ವಾಮ್ಯ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ದಾಳಿಮಾಡುತ್ತಿರುವ ಸರಕಾರದ ನೀತಿಯನ್ನು ವಿರೋಧಿಸಿ ನವೆಂಬರ್ 8 ರಂದು ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರು ಬೆಂಗಳೂರಿನಲ್ಲಿ ರಾಜಭವನದೆದುರು ಒಂದು ದಿನ ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಿದರು.

ಎನ್. ಸಿ. ಸಿ. ಯ ಕರೆಯ ಮೇರೆಗೆ ಬೇಡಿಕೆ ದಿನಾಚರಣೆಯ ಅಂಗವಾಗಿ ಈ ಕಾರ್ಯಕ್ರಮ ನಡೆಯಿತು. ಕೇಂದ್ರಕ್ಕೆ ಸಲ್ಲಿಸಲು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಕಾರ್ಮಿಕರನ್ನುದ್ದೇಶಿಸಿ ಕಾಂ| ಅನಂತಸುಬ್ಬರಾವ್, ಕೆ. ವಿ. ಶ್ರೀನಿವಾಸ್, ಪ್ರಭಾಕರಘಾಟಿ, ಮೈಕಲ್ ಫರ್ನಾಂಡಿಸ್, ಸಿ. ಗೋಪಾಲಕೃಷ್ಣ, ಕಾಂ| ಎಂ. ಬಿ. ಶಂಕರ್ ಮೊದಲಾದವರು ಮಾತನಾಡಿದರು.

ಭದ್ರಾವತಿಯಲ್ಲಿ ಉಕ್ಕು ಕಾರ್ಮಿಕರ ಒಕ್ಕೂಟದ ನೇತೃತ್ವದಲ್ಲಿ ವಿ. ಐ. ಎಸ್. ಎಲ್. ಕಾರ್ಖಾನೆ ಮುಂಭಾಗದಲ್ಲಿ ಮತಪ್ರದರ್ಶನ ನಡೆಸಲಾಯಿತು.

○

ಪ್ರಕಟನೆ

ಕರ್ನಾಟಕದಲ್ಲಿ ವಿಧಾನ ಸಭಾ ಚುನಾವಣೆಗಳು ಭರದಿಂದ ಸಮೀಪಿಸುತ್ತಿದ್ದು ವಿಪರೀತ ಕೆಲಸವಿರುವುದರಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಕಾಂ| ಎಂ ಕೆ ಭಟ್ಟರ ಆರೋಗ್ಯವನ್ನು ಗಮನದಲ್ಲಿಟ್ಟು ಅವರನ್ನು ಕಾರ್ಯದರ್ಶಿ ಸ್ಥಾನದಿಂದ ಬಿಡುಗಡೆ ಮಾಡಿ, ಕಾಂ| ಪಿ. ರಾಮಚಂದ್ರರಾವ್ ಅವರನ್ನು ಸಮಿತಿಯ ಕಾರ್ಯದರ್ಶಿಯನ್ನಾಗಿ ಚುನಾಯಿಸಿದೆ.

ಬ್ರೆಜ್ನೇವ್ ಅವರಿಗೆ ಶ್ರದ್ಧಾಂಜಲಿ

ನವೆಂಬರ್ 10 ರಂದು ನಿಧನಗೊಂಡ ಕಾಂ|| ಬ್ರೆಜ್ನೇವ್ ಅವರಿಗೆ ಸಿ. ಪಿ. ಐ. (ಎಂ) ಕುಂದಾಪುರ ತಾಲ್ಲೂಕು ಸಮಿತಿ ಶ್ರದ್ಧಾಂಜಲಿ ಸಲ್ಲಿಸಿದೆ. ಈ ಕುರಿತು 15-11-82 ರಂದು ನಡೆದ ಸಭೆಯನ್ನು ಕಾಂ| ಅಬ್ರಹಾಂ ಕರ್ಕಡ್ ಅವರು ವಹಿಸಿದ್ದರು.

ದಿನಾಂಕ 12ರಂದು ಬಿಜಾಪುರದಲ್ಲಿ ವಿರೋದ ಪಕ್ಷಗಳ ಆಶ್ರಯದಲ್ಲಿ ಸಂತಾಪ ಸೂಚಕ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ| ಎನ್. ಕೆ. ಉಪಾಧ್ಯಾಯ, ಚಂಚಲಕರ, ಶ್ರೀ ಪಾಯಣ್ಣಾ ನಾಗಡಾಣ, ಮೂಕಿಹಾಳ ಮುಂತಾದವರು ಮಾತನಾಡಿ ಶ್ರದ್ಧಾಂಜಲಿ ಸಲ್ಲಿಸಿದರು. ಮುಹಾಲದಾರ ವಕೀಲರು ಅಧ್ಯಕ್ಷತೆ ವಹಿಸಿದ್ದರು.

15-11-82 ರಂದು ಭದ್ರಾವತಿಯಲ್ಲಿ ಪಕ್ಷದ ಸದಸ್ಯರು ಸಭೆ ಸೇರಿ ಕಾಂ| ಬ್ರೆಜ್ನೇವ್‌ರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದರು.

ಕಾಂ|| ಗಂಗಾಧರ ನಮೋಶಿ

(1ನೇ ಪುಟದಿಂದ)

ಸಮಿತಿ ಸದಸ್ಯರಾಗಿಯೂ ದುಡಿದಿದ್ದಾರೆ. 1962 ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಉಮೇದ್ವಾರರಾಗಿ ವಿಧಾನ ಸಭೆಗೆ ಆರಿಸಿ ಬಂದಿದ್ದರು. 1963—64ರಲ್ಲಿ ಪರಿಷ್ಕರಣವಾದಿಗಳ ವಿರುದ್ಧ ನಡೆದ ಹೋರಾಟದಲ್ಲಿ ಇವರು ಸಿ ಪಿ.ಐ (ಎಂ) ಸೇರಿಕೊಂಡು ಹೈದರಾಬಾದ್, ಕರ್ನಾಟಕ ಪ್ರದೇಶದಲ್ಲಿ ಸಿ. ಪಿ. ಐ. (ಎಂ) ಕಾರ್ಯಕ್ರಮ ಯಶಸ್ವಿಗೊಳಿಸಲು ಸತತ ದುಡಿದಿದ್ದಾರೆ.

ಕಾಂ| ನಮೋಶಿಯವರು 1948 ಮತ್ತು 1962-65ರಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟು ಬಂಧನದಲ್ಲಿದ್ದರು. ಇವರು ಉತ್ತಮ ಸಂಘಟಕರೂ, ವಾಗ್ಮಿಯೂ ಆಗಿದ್ದರು. ಕಳೆದ 6-7 ವರ್ಷಗಳಿಂದಲೂ ಇವರು ಅನಾರೋಗ್ಯದಿಂದಿದ್ದರೂ ಕೊನೆಯುಸಿರೆಳೆಯುವವರೆಗೂ ಇವರು ಪಾರ್ಟಿ ಮತ್ತು ಕಾರ್ಮಿಕರಿಗಾಗಿ ನಿಷ್ಠೆಯಿಂದ ದುಡಿದಿದ್ದಾರೆ.

ತಮ್ಮ 54ನೇ ವಯಸ್ಸಿನಲ್ಲೇ ಕಾಂ| ನಮೋಶಿಯವರು ಅಕಾಲಿಕ ಮರಣಕ್ಕೆ ತುತ್ತಾಗಿದ್ದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಅವರ ಮರಣಕ್ಕೆ ತನ್ನ ಅತೀವ ದುಃಖ ವ್ಯಕ್ತ ಮಾಡುತ್ತದೆ. ಕಾಂ| ನಮೋಶಿಯವರ ಪತ್ನಿ, ಮಕ್ಕಳ ದುಃಖದಲ್ಲಿ ಇಡೀ ಪಾರ್ಟಿ ಪಾಲ್ಗೊಳ್ಳುತ್ತದೆ.

●

ವಿನೋಬಾ

ನವೆಂಬರ್ 15 ರಂದು ಪವನಾರ್ ಆಶ್ರಮದಲ್ಲಿ ಆಚಾರ್ಯ ವಿನೋಬಾ ಭಾವೆ ನಿಧನರಾದರು. ಮಹಾತ್ಮಾ ಗಾಂಧೀಯವರ ನೈಜ ಅನುಯಾಯಿಯಾದ ಆಚಾರ್ಯರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸಿದೆ.

●

ಕೊಂಡಜ್ಜಿ ಬಸಪ್ಪ

ಸ್ವಾತಂತ್ರ್ಯ ಹೋರಾಟಗಾರ, ಮಾಜೀ ಸಂಸತ್ ಸದಸ್ಯ ಶ್ರೀಕೊಂಡಜ್ಜಿ ಬಸಪ್ಪನವರು ನವೆಂಬರ್ 15ರಂದು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ಅವರು ಇತ್ತೀಚೆಗೆ ತೀವ್ರ ಅಸ್ವಸ್ಥತೆಯಿಂದ ಬಳಲುತ್ತಿದ್ದರು.

ಸ್ಕೌಟ್ ಮತ್ತು ಗೈಡ್ ಸಂಘಟನೆಗಳ ನೇತಾರರಾಗಿದ್ದ, ಪ್ರಾಮಾಣಿಕ ರಾಜಕಾರಣಿಯಾಗಿದ್ದ ಕೊಂಡಜ್ಜಿ ಬಸಪ್ಪನವರ ನಿಧನಕ್ಕೆ ಸಿ ಪಿ. ಐ. (ಎಂ) ರಾಜ್ಯ ಸಮಿತಿ ದುಃಖ ವ್ಯಕ್ತಪಡಿಸಿದೆ.

Printed Published & EDITOR by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore-560 053. Phone-24154, Prited at Ravee Traders, No. 8/1, J.M. Lane, Balepet Cross, Bangalore-560 053,